ಅತಿ ಸುಲಭವಾದ ಸಂಗತಿಯು ತನ್ನ ವಿದ್ಯಾರ್ಥಿಗಳಿಗೆ ಅತಿಕ-ಠಿಣವಾಗಿ ತೋರಬಹುದು. ಆದರಿಂದ ಪಾಠವನ್ನು ಚೆನ್ನಾಗಿ ತಿಳಿಸಿಕೊಡುವಲ್ಲಿ ಕೈಲಾದಮಟ್ಟಿಗೂ ಯತ್ನಮಾಡಿದಾಗ್ಯೂ, ವಿದ್ಯಾರ್ಥಿಗಳಿಗೆ ತಿಳಿದುಕೊಳ್ಳುವದಕ್ಕೆ ಅದು ಕಠಿಣವಾಗಿ ತೋರಬಹುದು. ಆ ಕಾರಣ ಶಿಕ್ಷಕನು ಹೇಳಿದ್ದು ವಿದ್ಯಾರ್ಥಿಗಳಿಗೆ ತಿಳಿಯದಿದ್ದರೆ, ನಾನು ಅದನ್ನು ಅವರಿಗೆ ಬಹು ಸುಲಭರೀತಿಯಿಂದ ತಿಳಿಸಿದ್ದೇನೆ, ಎಂಬದು ಶಿಕ್ಷಕನ ತಪ್ಪಾಗುತ್ತದೆ. ಹೀಗಂಬುವ ಶಿಕ್ಷಕನು ತಿಳಿದುಕೊಳ್ಳುವಲ್ಲಿ ವಿದ್ಯಾರ್ಥಿಗಳ ಸ್ವಂತ ಯತ್ನಗಳನ್ನು ಲಕ್ಷಿಸುವದಿಲ್ಲೆಂತಲೂ, ಅವರು ಅಂಥಾ ಯತ್ನಮಾಡಬೇಕೆಂದು ತಾನು ಅಪೇಕ್ಷಿಸುವದಿಲ್ಲೆಂತಲೂ ವ್ಯಕ್ತವಾಗುತ್ತದೆ. ಯಾವದೊಂದು ವಿಷಯವನ್ನು ನಿಃಸಂದೇಹವಾಗಿ ತಿಳಿಸಿಕೊಡುವದು ತನ್ನಿಂದಾಗದಿದ್ದರೆ, ಆ ವಿಷಯವನ್ನು ವಿದ್ಯಾರ್ಥಿಗಳ ಕೈಯಲ್ಲೇ ಬಿಡುವದು ಉತ್ತಮ. ಕಠಿನವಾದ ವ್ಯಾಖ್ಯಾನದಿಂದ ತೊಂದರೆಯುಂಟಾಗುವದು ಅಪರೂಪವಲ್ಲ.

ಒಂದು ವಿಶೇಷವಾದ ಅಭ್ಯಾಸ ಪುಸ್ತಕವನ್ನೇ ಹಿಂಬಾಲಿಸುವವನು ಯಾವ ವಿಷಯವನ್ನೂ ಪೂರ್ಣವಾಗಿ ಕಲಿಸಲಾರನು. ವಿಶೇಷವಾಗಿ ಆ ಪುಸ್ತಕವು ಒಂದು ವಿಷಯವನ್ನು ಸಾಧ್ಯವಾದಷ್ಟು ಸಂಗ್ರಹಿಸುತ್ತಿದ್ದರೆ, ಆರಂಭಕ್ಕೆ ಅದನ್ನು ಕೈಕೊಳ್ಳುವ-

ದು ತಕ್ಕದ್ದಲ್ಲ. ಎಂದಿಗೂ ಬದಲಾಗದಂಥ ಪಾಠಪುಸ್ತಕಗಳ ಆಧಾ-
ರದಿಂದಲೇ ನಮ್ಮ ಶಾಲೆಗಳು ಪರೀಕ್ಷಿಸಲ್ಪಡುವದರಿಂದು ನಿಯಮ
ಮಾಡಿದರೆ, ಅಂಥಾ ವಿದ್ಯಾಭ್ಯಾಸದ ಗತಿಯೇನಾಗುತದು? ಇಂ-
ಥಾ ಅಭ್ಯಾಸವು ನಮ್ಮ ಕಾಲದ ವೇದಪಾಠಕರ ಅಭ್ಯಾಸವನ್ನೇ ಹೋ-
ಲುವದು. ಯಂಥಾ ಉಪಾಯದಿಂದೇ ಆಗಲಿ, ನಿಯಮಿತ ಮ-
ರ್ಯಾದೆಯ ಮಟ್ಟಿಗೆ ಜ್ಞಾನವನ್ನು ಸಂಪಾದಿಸುವದಕ್ಕೆ ಸಾಕು. ಆದ-
ರೆ ಉತ್ತಮವಾದ ವಿದ್ಯಾಭ್ಯಾಸಕ್ರಮವು ಹಾಗಲ್ಲ. ನಾವು ಮಾಡು-
ವ ವಿದ್ಯಾರ್ಥಿಗಳ ಪರೀಕ್ಷೆಯಿಂದ ಅವರ ತಿಳುವಳಿಕೆಯ ವಿಸ್ತಾರ
ವು ಪರೀಕ್ಷಿಸಲ್ಪಡತಕ್ಕದ್ದೇ ಹೊರ್ತು ಅವರು ಸಂಪಾದಿಸಿದ ಜ್ಞಾ-
ನದ ವಿಸ್ತಾರವನ್ನು ಪರೀಕ್ಷಿಸುವದು ನಮ್ಮ ಮುಖ್ಯ ಉದ್ದೇಶವಾ-
ಗಿರಬಾರದೆಂದು ನಮ್ಮ ಅಭಿಪ್ರಾಯವುಂಟು. ನಿಯಮಿತ ಪುಸ್ತ-
ಕಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಿಸುವ ಕ್ರಮದಿಂದ ಇಂಥಾ ತ-
ರದ ಪರೀಕ್ಷೆಯಾಗುವದಿಲ್ಲ. ಬಹಳ ಜ್ಞಾನವನ್ನು ಸಂಪಾದಿಸಿ ಹೊಂ-
ತ ಮನಸ್ಸು ಸ್ವಾತಂತ್ರ್ಯದಿಂದ ತುಂಬ ಬದಹಗೆಯಾಗ ಇರುತ್ತದೆ.
ಅದರಲ್ಲಿ ಹೊಸ ಅಂಕುರವು ಯೆಂದೂ ಕಾಣದು. ಅದಕ್ಕೆ ಪಾ-
ಠವಾಗಿ ಜಾಗ್ರತಿಪಟ್ಟ ತಿಳುವಳಿಕೆಯು ಕೃಷಿ ಮನಸ್ಸು ಹದಮಾಡಿ-
ದ ಭೂಮಿಯ ಹಾಗೆ ಇರುತ್ತವೆ. ಅದರಲ್ಲಿ ಬಿತ್ತಿದ್ದು ಸಫಲ-
ವಾಗಿ ಬೆಳೆಯುವದು.

Shabdamanidarpana

ಶಬ್ದಮಣಿದರ್ಪಣ

ಕ್ರಿಯೆಯನ್ನದಿಯಕರಮವಿಭ
ಕ್ರಿಯನಲ್ಲದರ್ಥಮುಳ್ಳುದಂ ತದು ಲಿಂಗಂ ||
ನಿಯತತತತು ಭೇದಮದಾ.
ಕಯಾ ಕೃತ್ತದ್ಧಿತಸಮಾಸನಾಮಸ್ಥಿತಿಯಿಂ ||೧||

ಅರ್ಥ — ಕ್ರಿಯಾವಾಚಕವಾಗಿಲ್ಲದ್ದನ್ನು, ಸತ್ವ ವಿಭಕ್ತಿಗಳನ್ನು ಇಲ್ಲದ್ದನ್ನು, ನಿರರ್ಥಕವಾಗಿಲ್ಲದ್ದನ್ನು ಲಿಂಗವೆನ್ನುವದು. ಆ ಲಿಂಗವು ಕೃತ್, ತದ್ಧಿತ, ಸಮಾಸ, ನಾಮ, ಎಂದು ನಾಲ್ಕು ತರವಾಗಿರುತ್ತದೆ. ಕೃತ್, ತದ್ಧಿತ ಸಮಾಸ ನಾಮಗಳಿಗೆ ಏಳು ವಿಭಕ್ತಿಗಳು ಬರುತ್ತವೆ.

ಉದಾ. ಕೃತ್, ಮಾಡಿದ, ನೋಡಿದ; ತದ್ಧಿತ, ಅವನವಳ್ಳ, ಮಡಿವಳ್ಳ; ಸಮಾಸ, ತಂಗಾಳಿ, ಇಮ್ಮಾವು, ಮುಖಕಮಲ, ನೀಲೋತ್ಪಲ; ನಾಮ, ಕುದುರೆ, ಹಸು ಇ.; ಈ ದಕ್ಷು ಎಂಟನೆಯ ಸಮಾಸವು, ಬರಿದೀರ ನೆಂಬ ಕ್ರಿಯಾಸಮಾಸವು ಕೃತ್ತದ್ಧಿತಲಿಂಗಗಳು, ಇಕ್ಕೆ ಸಮಾಸಕಂತೆ ಬಿಟ್ಟುಕವು

ಭೂತಭವಿಷ್ಯತ್ಕ್ರಿಯೆಗಳು.
ವೀತವಿಭಕ್ತಿಗಳನುಳ್ಳ ಕೃತ್ತ್ಯವನ ||

ಭೂತಂಪ್ರತಿವಿಧಿಗಳೂ

ಗ್ರಾತರದಿಂಮಧ್ಯಮೋತ್ತಮಕ್ರಿಯೆಗಳೊಳ್ಗಂ॥ ೨॥

ಅರ್ಥ – ಭೂತಕಾಲಕ್ರಿಯೆಯೂ, ಭವಿಷ್ಯತ್ಕಾಲಕ್ರಿಯೆ-
ಯೂ ತಂಮ ಅಂತರ್ಗತ ಆಗಮಗಳ ಬೆರಸಿದ್ದ ವಿಭಕ್ತಿಮಾತ್ರ
ಮಂಕಲ್ಗೆಯೆ, ಸ್ತ್ರೀಲಿಂಗವನ್ನು ಹೊಂದುವವು. ವರ್ತಮಾನಕಾ
ಲವಿಧ್ಯರ್ಥಗಳಲ್ಲಿಯೂ, ಮಧ್ಯಮೋತ್ತಮಪುರುಷಗಳಲ್ಲಿಯೂ
ಪುಲ್ಲಿಂಗವು ಬಾರದು. (ಕ್ರಿಯಾಪದಗಳಿಗೆ ನಾಮಪದಗಳ ಹಾಗೆ ವಿ
ಭಕ್ತಿಗಳನ್ನು ಹೊಂದಿಸುವ ಹಾಗೆ ಪ್ರತ್ಯಯ ಬರುವ ವಿಶೇಷ ಪ್ರಕಾರ
ಗಳನ್ನು ಈ ಶ್ಲೋಕವು ಹೇಳುತ್ತದೆ.)

ನಮುಪಾತ್ರಕ್ರಿಯೆ ಮುಂದಾ

ಕ್ರಮಾದೆಯುಂಸುಕವಿರಚಿತನಾಮಪದಾದಿಂ॥

ದಮಗರ್ಳಿಂ ಲಿಂಗಂ ಮಾರ್ಗ

ಕ್ರಮ ಮಂ ಕಾಣತ್ತುಬಹುದಾದ್ರಕ್ರುತಿಯೊಳ್ ॥೩॥

ಅರ್ಥ – ನಮಸ್ತ್ರಗಳ ಪಿಂಡದಿನರ್ದಿಂ ನಮೋಸ್ತುಗಳಿಂದು
ಸರ್ವಾರ್ಥಸಿದ್ಧಾಯುತ್ತ ವಾತ್ರ್ಯಮಾತಿ – ತೋರ್ಗೂಪ್ರವ
ಸಾಕ್ಷರ (ಡ) ಯುಮೆಂತ್ರರದೇವಂ ಗುಣಕ್ಕೆ ನಲ್ಲಗಳೆಶಂ, ಸೌಕಾನಿ
ಗಳಾಕರಿ, ಅಹಿಂಸಾಪರಮೋಧರ್ಮವೆಂಬುದನಿತೆತ್ರ್ಯವಿತ್ತ
ವರ್ಕಿಣಸ್ತ್ರ\ಕೆತ್ರ)ಯೋಸ್ತ್ರ)ಬಾಗಮಣಿ। ತತ್ರ್ಯಚಿತ್ತಪರ್ಕಿಣ)

ಕೀಂದು ಸೂತ್ರಾರ್ಥ (ಅನೇಕಶಬ್ದಘಟಿತವಾದ ವಾಕ್ಯಗಳಿಗೆ ನಾಮ ಪದವೆಂತೆ ವಿಭಕ್ತಿಗಳನ್ನು ಹತ್ತಿಸುವ ಪ್ರಕಾರವು)

ವಿನುತ ಕ್ರಿಯಾತ್ಮಕಂಗಳ್
ಮೆನಿಸುವ ಸಂಸ್ಕೃತದ ಭಾವವಚನಂಗಳನಾ॥
ಯ್ದುನಿತರ್ಕೆಯುಂ ಪ್ರತ್ಯಯ.
ವನಿವರ್ತ್ತಿಸಿ ನಿಱಿಸಿ ಬರ್ಕುಮಾಕೃತ್ಪ್ರಕಂ॥೪॥

ಅರ್ಥ— ಸನ್ನವದಲ್ಲಿ ಕ್ರಿಯಾವಾಚಕವೆನಿಸುವ ಸಂಸ್ಕೃತಭಾವವಚನಂಗಳಿಗೆ ಇನ ಪ್ರತ್ಯಯಮಂ ವರ್ತಿಸಿ ಕೃದಂತಮಂ ಮಾಳ್ಪುದು- ಉದಾ— ಭಾವಿಸಿದಂ, ಭಂಗಿಸಿದಂ, ಚರಿಯಿಸಿದಂ, ಇಂ;

ಕ್ಷಿತಿಯೊಳ್ ರೂಢಾನ್ವರ್ಥಾ
ಕಿತಮೆಂಬಾ ನಾಮಮಱಿಗೆ ಮೂಱೆರವಸಮಾ॥
ಪತಿಯೊಳ್ಗೊಲಿಸಿಪೇಱ್ದುನಿ
ಶ್ಚಿತನಾಮಂ ಪಂಚವರ್ಣಕೃತಪರಿಮಾಣಂ॥೫॥

ಅರ್ಥ— ರೂಢನಾಮವೆಂದು, ಅನ್ವರ್ಥನಾಮವೆಂದು, ಅಂಕಿತನಾಮವೆಂದು ನಾಮಂಗಳು ಮೂರು ತೆರವಾಗಿರುತ್ತವೆ. ರೂಢ (ಜಾತಿವಾಚಕ) ನಾಮವು ಪ್ರಸಿದ್ಧವಿ. ಅನ್ವರ್ಥಕನಾಮವು ಗುಣಾನುರೂಪವೆಂದೂ, ಅರ್ಥಾನು

ರೂಪವೆಂದೂ ಯೌಗಿಕ ಮುವಿಧವು. ಅಂಕಿತನಾಮವು ಜನರು

ಇಡುವ ಪದನಿಷ್ಟಾನುರೋಧವಾಗಿ ಯೆಂಥಾ ದಾದರೂ ಇರು

ವದು. ಬಳಿಕ ನಾಮವು ಪಮಾನ ಮಿಶ್ರಿದೊಂದಕ್ಕೆ ಮೊದಲಾ

ನಿವಿಧಪ್ರಕಾರಮುಂಟು. ಉದಾ— ರೂಢ, ನೆಲಂ, ಪೊಲಂ,

ಜಲಂ, ನಾಮಾನುರೂಪ ಅನ್ವರ್ಥ — ದಾನಿದಂಯಂಪರನೆತ್ತ

ಭಿ| ಮಾನಿಪ ರಾಶ್ರಮಿ ಯಶೋಂತ್ರೀ ನಿಂತಿಷ್ಟಂತಿ| ಪ್ರಾನಿಲ ಮ

ನೆನಿಪಂ. ಅರ್ಥಾನುರೂಪ ಮಾದ ಅನ್ವರ್ಥ — ಹೆಗ್ಗೆಗಾಲಂ, ನಿ

ದ್ರಿಮೂಗಂ, ಕುಸಿಗೊರಲಂ, ನವಟಿರಾಯಂ — ಅಂಕಿತಕ್ಕೆ —

ದೂಡಿಗಂ, ಕಾಟಂ, ಕನಪಂ, ಮಾರಂ —, ಬಿಟದಕೆಸಪಗೆ —

ಸಾ, ನಾಗಂ, ಪೊತ್ತ್ಗೆ, ಕವಳಿಗೆ, ಕತ್ತವತ್ತಿಗೆ.

ಒಬ್ಬತ್ತು ಮೊಲ್ಲ ಮುಟಿತ್ತು.
ಶ್ರೀಕುಬನಿದನಿದು ಕಡಿಮೆನಿಡಿನಿಜಂಬಂ॥
ತುಕ್ಕವ್ಯಮುದು ಕವೆಂದುಪಕ
ಯಶ್ಯಂ ಗುಣಾವಾಚಿ ಮಿಶ್ರಕಾರಂತ್ರಿತಂ॥೬॥

ಅರ್ಥ— ಪ್ರಕಾರದು ಕಾರಂಗಳ್ಗೆ ಕವೆಯಾ ಗುಣವಚನಂ

ಗಳ್ಗಾಂ ಪವಕೊರ್ಕೆ ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು

ಉದಾ— ಪೊತ್ತು ಪೊದಱ್ತು, ಕಿಱುದು, ನೆಱಿತ್ತು, ಕರುತ್ತು, ಸ

ಕಾರಾಂತಕ್ಕೆ— ಬನಿದು, ಅನಿದು, ಕಡಿದು,

ಅದುವಿದುವುದುವಾವುದುವೆ
ಲ್ಲದುಪೆಱತೆನಿಪ್ಪಶಬ್ದಂಗಳ್ತ॥
ದ್ಧಿತಸರ್ವನಾಮಮಕ್ಕುಂ
ವಿದಕ್ಕಂಪದವಾದುನಿಕ್ಕಲಿಂಗಸ್ಥಿತಿಯೊಳ್॥೬॥

ಅರ್ಥ- ಅದು, ಇದು, ಉದು, ಆವುದು, ಎಲ್ಲದು, ಪೆಱದು ಎನ್, ಪೆಱತು ಎಂಬಶಬ್ದಂಗಳಾದಿಯಾದುವು ಸರ್ವನಾಮಂಗಳ್॥

ಏನೆಂಬಸರ್ವನಾಮಂ
ತಾನಪುದಲ್ಲಿಂಗದೇಕವಚನಂ ಸಿಜದಿ
ಏನಂಬಹುವಚನಾರ್ಥಮ.
ನಾನಲ್ಪಕ್ಕುಮತ್ತಿ ಪ್ರಕೃತಿ ಏನ್ನತಿಯೋಗ್ರ॥೭॥

ಅರ್ಥ- ಪ್ರಶ್ನವೇ- ಉದಾ- ಆವನೇನ್, ಅದೇನ್, ಅವಳೇನ್, ಬಹುವಚನಕ್ಕೆ- ತತ್ಪ್ರಯೋಜನಾಲಾಪಂಗಳೇನ್.

ಸಮುದಿತ ಸಂಖ್ಯಾವ್ಯಯಕೃ
ತಮನಿಸಿವಸ್ತ್ರಿಪನಿಘಂಟುವಿನನಾಮವಹೋ
ತ್ರಮವರ್ಣಪ್ರಕೃತಿಗಳಂ
ಸಮಸಂಸ್ಕೃತನಾಮದಿಚ್ಛುಲಿಂಗಂವೊಕ್ಕ

ಅರ್ಥ- ಸಂಖ್ಯಾವ್ಯಯಂಗಳಂ ಕಳೆದುಳಿದ ನಿಘಂ...

ಸಂಯುಕ್ತಾಕ್ಷರವುಳ್ಳ (ಉಚ್ಚಾರಣೆಯಲ್ಲಾಗದಿದ್ದರೆ) ಸಂಸ್ಕೃ
ತಸಮಪ್ರಕೃತಿಗಳ್ ಕನ್ನಡಕ್ಕೆ ಸೇರುವಾಗ "ಸಮಸಂಸ್ಕೃತ
ಸಂಬಂಧಿಸಿದ ಅಂಗಂ ಮಾಳ್ಕೆ. ಉದಾ - ಕಾಮಂ, ಭೀಮಂ,
ನಾಟಕಂ, ಇಂತು ಸಮಸಂಸ್ಕೃತಪದಂಗಳ್ ಅಚ್ಚಗನ್ನಡದೊ
ಳ್ಸೇರಿಸಿ ಸಮಾಸಂ ಮಾಡಲಾಗದು. ಉದಾ - ಅರಸುಕುಮಾ
ರ, ಹಿರಿಯವನಿತೆ, ಮುತ್ತಾವಳಿ, ಯೆಂಬುವ ಸಮಾಸಮಾ
ಡಲಾಗದು.

ವಿದಿತಮೆನಿಪವ್ಯಯಮುಂ
ತ್ರಾದಿಯುಂ ಕೃತ್ಪ್ರಜಂತಮುಂ ಸಂಸ್ಕೃತದೊಳ್ ॥
ಪದವಿಧಿಯಂ ನೆರೆತಳೆದ
ಲ್ಲದೆ ಕನ್ನಡದಲ್ಲಿ ಅಂಗಮಾಗವು ನಿಜದಿಂ ॥೧॥

ಅರ್ಥ — ಸಂಸ್ಕೃತದಲ್ಲಿ ಪ್ರಸಿದ್ಧವಾದ ಅವ್ಯಯಂಗಳು, ತ್ರ
ದಾದಿಗಳು, ಕೃತ್ಪ್ರಜಂಗಳು ಸಂಸ್ಕೃತದೊಳ್ ಪ್ರಮಾಣಮಂ ಪಡೆ-
ದಲ್ಲದೆ ಕನ್ನಡದೊಳ್ ಸ್ವ-ಭಾವದಿಂ ಅಂಗವಾಗವು. ಹಾಗಂದರೆ
ಈ ಶಬ್ದಗಳು ಸಂಸ್ಕೃತಸಮಾನ ಘಟಿತವಾಗದೆ ಸ್ವತಂತ್ರ
ವಾಗಿ ಕನ್ನಡ ವಿಭಕ್ತಿಗಳನ್ನು ಹೊಂದುವದಿಲ್ಲ.

ಉದಾ - ಅವ್ಯಯ - ಅಂತರ್, ಬಹಿರ್, ಉಚ್ಚೈಃ, ನೀಚೈಃ,
ಮುಹುಃ. ತ್ರಂ ತದ್ಧಾದಿ — ತ್ವದ್, ತದ್, ಯದ್, ಏತದ್,

ಇದಮ್, ಅದಸ್, ಯುಷ್ಮದ್, ಅಸ್ಮದ್, ಭವತ್, ಕಿಂ-ಶಬ್ದ
ಜಂತಗಳು - ಕಣಾತ್, ಘಟಾತ್, ಪ್ರಶಾಂತ್, ಕವಿತ್, ತಲತ್, ಮ
ಲತ್, ಲಸಿತ್ ಇಂ. ಈ ಶಬ್ದಗಳಿಗೆ ಕನ್ನಡದ ವಿಭಕ್ತಿಗಳನ್ನು ಹಚ್ಚ
ಕೂಡದು. ಆದರೆ ಸಮಾಸದಲ್ಲಿ ಬರತಕ್ಕವುಗಳಿಗೆ ಕನ್ನಡದ ವಿಭಕ್ತಿ
ಗಳನ್ನು ಹಚ್ಚಬಹುದು.

ಉದಾ - ಅವ್ಯಯಸಮಾಸ - ಅಂತರ್ಮುಖಂ, ಬಹಿರ್
ಗಂ, ಉಪರ್ಯುದ್ಯಾನಂ; ಪ್ರಾದಿಸಮಾಸ - ಪ್ರತ್ಯಕ್ಷಂ,
ಪ್ರತ್ಯುತ್ತರಂ, ಪರಿತ್ಯಾಗಂ, ಪರ್ಯಂತಂ, ಕರ್ಮಧಾರಯ ಸ
ಮಾಸ - ಸ್ವಾತಂತ್ರ್ಯಂ, ಘನಸ್ವರೂಪಂ, ಬಹುಧನಂ,
ಇತ್ಯಾದಿ.

Notice

जाहीरात.

दक्षिण भागांतील सर्व स्कुलमास्तर यांस.

कळविण्यांत येतेकीं, तारीख १ ली एप्रिल १८६७ इसवीपासू
न हिशोबीं नवें वर्ष आरंभ होणार. याजकरितां सर्व मा
स्तरांनीं खालीं लिहिल्या प्रमाणें वहिवाट ठेवावी.

१ तारीख १ तागाईत तारीख १५ मार्च १८६७ पावेतो १५ दि-

वर्षाच्या अखेर साल्या महिना समजून झालेंत तेव्हां ती असे ल ती तिजोरींत भरणा तारीख १० चे आंत करावी.

२ कोणते ही मास्तरांकडे कोणते ही प्रकारची शिल्लक साल अखेरीस राहूं नये. अशी तजवीज ठेवावी. अमानत खा त्यास जर एकादी रकम जमा असेल व तिचा खर्च लागला-स होणार तर मात्र ती शिल्लक तिजोरींत भरूं नये.

३ साल अखेरचे कागद मास्तर यांजकडून डिपुटी इन्स्पेक्टर यांजकडे जाण्याचे ते साल अखेर होतांच कागद खेरर वाना करावे. कागद मुदतशिर जाण्याची खोटी होऊं नये.

सदर्हू प्रमाणें वहिवाट ठेवावी. कळावें तारीख २० फेब्रुवारी. १८५७ इसवी.

(Signed) W. A. Russell.

इ. इ. दक्षिण भाग.

Notice

जाहिरात.

दक्षिण भागांतील सर्व स्कुलमास्तर यांस.

हाली मासिकपत्रकाचा नमुना छापला जात आहे. याप्रमाणें

सर्व मास्तरांनीं महिना अखेर मासिकपत्र तयार करून आ
पापले डि- इन्स्पेक्टर यांजकडे दर महिन्याचे पहिले तारखे
स रवाना करित जावें. मासिक पत्रक पाठविण्यास कोणाक
डून खोटी झाल्याचें आढळ्यास करल्यास योग्यत जाबिज-
केली जाईल. कळावें तारीख२० माहे फेब्रुवारी सन१८६७
इसवी.

(Signed) W. A. Russell.

इ. इन्स्पेक्टर दक्षिण भाग.

ದ॰ ಸ್ತ್ರಾಭಾಗದೊಳಗಿನ ಯಾವತ್ತು ಸಾಲೆ ಮಾ

ಸ್ತರಗೆ.

೬ ಇಸ್ಪ್ರೆಕ್ಟರ ಸಲೆಕ್ಷನ ಪ್ರೆಸ್ಟರ ದಕ್ಷಿಣಭಾಗ ಉತ್ತ [illegible]

ದ– ತಾ॥ ೩೧ ಜನೇವರಿ ೧೮೬೭ ರ ಪತ್ರದಿ ಮೊದಲ್ನೇ ಕ್ವಾರ್ಟ-
ರ [illegible] ನ ವರುಷ ಆರಂಭ ದಾಗ ಪತ್ರದ್ದು ಅವರನಿಲುವಾಗಿ
ನವರ ಮಾಸ್ತರರು ಕೆಲ್ಸ ಬರದಂತೆ ವಹಿವಾಟು ಎದ [illegible].

೧ ತಾ॥ ೧ ಜುಂದ ತಾ॥ ೩೧ ಮೆ ೧೮ ಮಾರ್ಚ [illegible] ಇಷ್ಟ
೧೮ ದಿವಸ ಪವರುಷದ ರಜ ಇರುತಿಂಗಳ್ನ ಮೆಂದು ತಿಳಿ [illegible]
ಲ ಯಾಗ್ಲಿ [illegible] ಫೀ ತಿರಾಹಾದ ಯಲ್ಲಾ [illegible]

ಭರಣಾ ಮಾಡಬೇಕು.

೧ ಯಾವ ಮಾಸ್ತರನಕಡಿ ಇನ್ನಾವದೂ ಯಾವತರದ ಶಿಲಕ ವಾವದೂ ವರುಷದ ಆಖೇರಕ್ಕೆ ಉಳಿಯಬಾರದು. ಅವುಗಳನ್ನು ತೀರಜಮೆ ಮಾಡಲಿಕ್ಕವು ಮಾತ್ರವು ಖರ್ಚಾಗುವ- ಕಾಗದಕ್ಕೆ, ಅಂಚಿಲಕವನ್ನು ತಿಜೋರಿಗೆ ಭರಣಾ ಮಾಡಬೇಕು

೧ ಮಾಸ್ತರರಿಂದ ಡಿಪುಟಿ ಇನ್ಸಪೆಕ್ಟರರಕಡೆಗೆ ಹೋ- ಗತಕ್ಕ ಸಾಲ ಆಖೇರದ ಕಾಗದಗಳು ಸಾಲ ಆಖೇರವಾದ- ಕೂಡಲೆ ೧೫ ದಿವಸಗಳಲ್ಲಿ ಬೇಕು ಮುಟ್ಟತಕ್ಕ ಬಾ- ಕಿದು.

ಸೋ. ಬಿ. ಸಂ. ೩ ವಪಾಟಬಿಚಬೇಕ್. ತಾ|| ಫೆಬ್ರುವರಿ ೧೮೬೫

ದ. ಭಾಗದೊಳಗಿನ ಮಾಸ್ತರರಿಗೆ-

೨. ಇ. ದ. ಭಾಗ ಇವರಕಡಿಯಿಂದ- ಹೊಸ ಮಾಸಿಕ- ಪತ್ರದ ನಮೂನೆಯು ಛಾಪಿಸಲ್ಪಡುತ್ತದೆ. ಅದರಂತೆ. ಎಲ್ಲ ಮಾಸ್ತರರು ತಿಂಗಳ ಆಖೇರಕ್ಕೆ ಮಾಸಿಕ ಪತ್ರಗಳನ್ನು ತಯಾರಮಾಡಿ ತಮ್ಮ ತಮ್ಮ ಡಿಪುಟಿ ಇನ್ಸಪೆಕ್ಟರರಿಗೆ- ಪ್ರತಿ ತಿಂಗಳದ ಮೊದಲನೆ ತಾರೀಖಿನಲ್ಲಿ ಕಳಿಸತಕ್ಕದ್ದು ಮಾಸಿಕ ಪತ್ರವನ್ನು ಕಳಿಸುವ ವಿಷಯದಲ್ಲಿ ಯಾರಕಡಿ

Physical Geography

ಭೂಗೋಳಶಾಸ್ತ್ರ

೧ನೇ ಭಾಗ.

೧. **ಆಕಾಶವೆಂಬದೊಂದು** ಗೋಳಾಕಾರವುಳ್ಳ ಪ್ರದೇಶವು. ಅದು
ಸುತ್ತ ದಿಕ್ಕುಗಳಲ್ಲಿಯೂ ಕಾಣುತ್ತಿರುವ ಹಾಗೆ ತೋರುವದು
ನುವದು ಮನುಷ್ಯರಿಗೆಲ್ಲ ಸೂರ್ಯ ಚಂದ್ರ ಮೊದಲಾದವು
ಸುತ್ತ ಕೆಲವು ಜ್ಯೋತಿಗಳ ಸಮೂಹ ... (ಇವೆ
ವವೆ) ವೃಂದ. ಅದು ಬಹಳ ಎತ್ತರವಾಗಿಯೂ, ಅತಿವಿಸ್ತಾರ
ವಾಗಿಯೂ ... ನೀಲವರ್ಣವಾಗಿಯೂ ತೋರುವದ
ರಿಂದ (ನೀಲ ಗಗನ) ಅದು ನೀಲವರ್ಣವೆಂಬ
... ಕಾಣುತ್ತದೆ. ಆಕಾಶವು
... ಅದು ...
... ತೋರುತ್ತದೆ ... ಅಲ್ಲಿ
... ಕಾಣುತ್ತದೆ.

ಈ ... ಆಕಾಶದಲ್ಲಿ ... ಕೆಲವು ಇವೆ
... ಆಕಾಶದ ನೀಲವರ್ಣದ ...
... ಆಕಾಶದ ...
... ನೀಲವರ್ಣವಾದ ಆಕಾಶವು ...

ಕಾಣಿಸುತ್ತಿರುತ್ತದೆ.

೧ ಆಕಾಶದಲ್ಲಿ ಅಸಂಖ್ಯವಾದ ನಕ್ಷತ್ರಗಳೂ, ಸೂರ್ಯ ಗ್ರಹ, ಉಪಗ್ರಹ, ಧೂಮಕೇತುಗಳೂ ವಾಸವಾಗಿದ್ದಾವೆ. ಇವುಗಳಲ್ಲಿ ಕೆಲವು ಸ್ವಪ್ರಕಾಶವಾಗಿಯೂ, ಕೆಲವು ಪರಪ್ರಕಾಶವಾಗಿಯೂ ಇರುತ್ತವೆ.

ಈ ನಕ್ಷತ್ರಗ್ರಹಾದಿಗಳೆಲ್ಲಾ ಭೂಮಿಯಿಂದ ಅತಿದೂರವಾಗಿದ್ದಾಗ್ಯೂ ಅವು ಆಕಾಶದ ನೀಲವರ್ಣದ ಮರ್ಯಾದೆಯ ಒಳಗೇ ಇರುತ್ತವೆಂದು ನಮಗೆ ಕಾಣಿಸುವದಕ್ಕೆ ವಾತಾವರಣದ ಪಾರದರ್ಶಕತ್ವವೇ ಕಾರಣವು.

೨ ನಕ್ಷತ್ರಗಳೆಲ್ಲಾ ಸ್ವಪ್ರಕಾಶಗಳಾಗಿರುತ್ತವೆ. ಅವು ಭೂಮಿಯಿಂದಲೂ, ಒಂದರಿಂದೊಂದಕ್ಕೂ ಲೆಕ್ಕಿಸಲಾಗದಷ್ಟು ದೂರವಾಗಿರುತ್ತವೆ. ಅವು ಸ್ಥಿರವಾಗಿದ್ದಾಗ್ಯೂ ಭೂಮಿಯು ತಿರುಗುತ್ತಿರುವದರಿಂದ ಅವುಗಳಿಗೆ ಉದಯಾಸ್ತಗಳುಂಟೆಂದು ತೋರುತ್ತದೆ.

ನಕ್ಷತ್ರಗಳು ಬೇರೆ ಬೇರೆ ಸೂರ್ಯರಾಗಿದ್ದು ಅವುಗಳ ಸುತ್ತುಮುತ್ತು ಎಷ್ಟೋ ಗ್ರಹಗಳೂ, ಉಪಗ್ರಹಗಳೂ ತಿರುಗುತ್ತಿರಬಹುದೂ, ಮತ್ತು ಅವುಗಳೊಡನೆ ಆ ನಕ್ಷತ್ರಗಳೆಂಬ ಸೂರ್ಯರುಗಳು ಬೇರೊಂದು ಅತಿದೂರವರ್ತಿಯಾದ ಗೋಲದ ಸುತ್ತಲೂ ತಿರುಗುತ್ತಿರಬಹುದೆಂದು ವಿದ್ವಾಂಸರು ತರ್ಕಿಸುತ್ತಾರೆ. ನಕ್ಷತ್ರಗಳು ಅತಿದೂರವಾಗಿರುವದರಿಂದ

ಅವು ಬಹುಸಣ್ಣವುಗಳಾಗಿಯೂ, ಒಂದರಿಂದೊಂದಕ್ಕಿರುವ ಅಂತರವಷ್ಟು ಬದಲಾಯಿಸದಿರುವಂಥವುಗಳಾಗಿಯೂ ಇರುತ್ತವೆ.

೪ ದುರ್ಬೀನಿನ ಸಹಾಯವಿಲ್ಲದೆ ಕಣ್ಣಿಗೆ ಕಾಣಿಸುವ ನಕ್ಷತ್ರಗಳು ಸುಮಾರು ೩೦೦೦ ಉಂಟು. ಅವುಗಳ ಮಹತ್ತ್ವಾನುಸಾರವಾಗಿ ಅವು ೬ ವರ್ಗಗಳಾಗಿ ವಿಭಾಗಿಸಲ್ಪಟ್ಟಿವೆ. ಮೊದಲನೇ ವರ್ಗದಲ್ಲಿ ೨೦ ನಕ್ಷತ್ರಗಳುಂಟು; ಅವು ಎಲ್ಲಾದಕ್ಕೂ ದೊಡ್ಡವುಗಳಾಗಿಯೂ ಹೆಚ್ಚು ಪ್ರಕಾಶಮಾನವಾಗಿಯೂ ಇರುತ್ತವೆ. ಎರಡನೇ ವರ್ಗದಲ್ಲಿ ೬೫, ಮೂರನೇದರಲ್ಲಿ ೨೦೦, ನಾಲ್ಕನೇದರಲ್ಲಿ ೫೩೦, ಐದನೇದರಲ್ಲಿ ೧೬೦೦, ಆರನೇದರಲ್ಲಿ ೪೮೦೦ ನಕ್ಷತ್ರಗಳುಂಟು. ಮೊದಲನೇ ವರ್ಗದಿಂದ ಉತ್ತರೋತ್ತರವಾಗಿ ಮಹತ್ತ್ವ ಕಡಿಮೆಯಾಗುತ್ತಾ ಹೋಗುತ್ತದೆ. ಉತ್ತರಧ್ರುವನಕ್ಷತ್ರವು ಎರಡನೇ ವರ್ಗದ್ದಾಗಿರುತ್ತದೆ.

ಇವುಗಳಲ್ಲದೆ ದುರ್ಬೀನಿನ ಸಹಾಯದಿಂದ ಕಾಣಿಸುವ ನಕ್ಷತ್ರಗಳು ಅನೇಕ ಕ್ರೋರು ಉಂಟು. ಅವುಗಳ ಮಹತ್ತ್ವಾನುಸಾರವಾಗಿ ೭ನೇ, ೮ನೇ ಮೊದಲಾದ ವರ್ಗಗಳಾಗಿರುತ್ತವೆ.

೫ ನಕ್ಷತ್ರಗಳ ಬೇರೆ ಬೇರೆ ಗುಂಪುಗಳಿಗೆ ಪುಂಜವೆಂದು ಹೆಸರು. ಮುಖ್ಯವಾಗಿ ೩ ಪ್ರದೇಶಗಳಲ್ಲಿ ಪುಂಜಗಳು ಕಾಣುತ್ತವೆ. ಉತ್ತರಧ್ರುವನಕ್ಷತ್ರದ ಹತ್ತಿರ ಇರುವವು ಉತ್ತರಪುಂ-

ಜಗಳು ಅನ್ನುವ ಪದದ ಈ ದಿನದಲ್ಲಿ ದಕ್ಷಿಣಾಕಾಶದಲ್ಲಿ ಪುಂಜಗಳುಂಟು

೫. ಈ ಪಟಗಳ ಮಧ್ಯದಲ್ಲಿ, ಅಂದರೆ ಖಗೋಲದ ಮಧ್ಯಭಾಗ

ದಲ್ಲಿ ಅದರ ಸುತ್ತ ಮುತ್ತಲು ವರ್ತುಲಾಕಾರವಾಗಿ ಅನೇಕ ಪುಂ

ಜಗಳು ಹರಡಿರುವುವು. ಅವುಗಳಿಗೆ ಮಧ್ಯಪುಂಜವೆಂಬ

ಹೆಸರು. ಬೇರೆ ಬೇರೆ ಪುಂಜಗಳಿಗೆ ಪ್ರಾಚೀನ

ಸಂಸ್ಕೃತ ಹೆಸರುಗಳು ಗೊತ್ತಿಲ್ಲ.

೬. ಉತ್ತರ ಪುಂಜಗಳು ಏಳುಂಟು. ಇವೆಲ್ಲ ಕೂಡಿ

೨೦ ನಕ್ಷತ್ರಗಳುಂಟು. ಆ ಪುಂಜಗಳಲ್ಲಿ ಪ್ರಾಚೀನಗಳ ಪು

ಜ ಸಮ್ಮಂಧದ ಪ್ರಸಿದ್ಧವಾದ ಉತ್ತರ. ಇದರಲ್ಲಿ ೭ ಮೊದಲ

ನೇ ವರ್ಗದ ನಕ್ಷತ್ರಗಳು, ೨ ನೇ ವರ್ಗದ ನಕ್ಷತ್ರಗಳೂ ಇ

ರುತ್ತವೆ.

೭ ದಕ್ಷಿಣ ಪುಂಜಗಳು ೩೦ ಕ್ಕೂ ಉತ್ತರ. ಇವುಗಳಲ್ಲಿರು

೧೦ ನೇ ವರ್ಗದ ನಕ್ಷತ್ರಗಳುಂಟು. ಇವುಗಳಲ್ಲಿ ಬಹಳ ಪುಂ

ಜಗಳನ್ನು ನಮ್ಮ ಜನರು ಬಲ್ಲರು. ಆದರಲ್ಲಿ ಅತಿ

ಪ್ರಕಾಶವುಳ್ಳ ... ೧ ನೇ ವರ್ಗದ

ಹ ನಕ್ಷತ್ರಗಳುಂಟು.

೮ ಮಧ್ಯ ಪುಂಜಗಳು ... ಉತ್ತರ ...

ಇವೆ. ಈ ಪಟ್ಟದಲ್ಲಿ ೧೨ ಪುಂಜಗಳುಂಟು, ...

ರಾಶಿ (ಗುಂಪು) ಯೆಂಬದೆನಲುಂಟು.

ರಾಶಿಗಳ ಹೆಸರು.	(ಅರ್ಥ)	ಅವುಗಳ ಗುರುತುಗಳು.			ಒಂದೊಂದರಲ್ಲಿ ನಕ್ಷತ್ರಗಳು.
೧ ಮೇಷ	(ಟಗರು)	♈			೬೫
೨ ವೃಷಭ	(ಎತ್ತು)	♉	"	"	೧೬೦
೩ ಮಿಥುನ	(ಸ್ತ್ರೀಪುರುಷ)	♊	"	"	೮೫
೪ ಕರ್ಕ	(ಏಡಿ)	♋	"	"	೭೧
೫ ಸಿಂಹ	—	♌	"	"	೯೬
೬ ಕನ್ಯಾ	—	♍	"	"	೨೩
೭ ತುಲಾ	(ತಕ್ಕಡಿ)	♎	"	"	೬೧
೮ ವೃಶ್ಚಿಕ	(ಚೇಳು)	♏	"	"	೮೩
೯ ಧನು	(ಬಿಲ್ಲು)	♐	"	"	೧೩೬
೧೦ ಮಕರ	(ನೆಗಳು)	♑	"	"	೮೧
೧೧ ಕುಂಭ	(ಕೊಡ)	♒	"	"	೧೩೯
೧೨ ಮೀನ	—	♓	"	"	೨೩

ನಕ್ಷತ್ರಗಳಲ್ಲಿ ಮೊದಲನೆ ರಾಶಿಗಳು [illegible] ರಾಶಿಚಕ್ರದ [illegible] ಉತ್ತರಕ್ಕೆ, [illegible] ಅವುಗಳ [illegible] ಈ ರಾಶಿ [illegible] [illegible]

ಯೋನಿಕೂಟ ಪ್ರವೃತ್ತಿ.

ಒಂದೊಂದು ರಾಶಿಯು ವರ್ತುಲದ ೧೨ನೇ ಭಾಗವಾದ್ದ ಸಾಚಿಕ್ರಯಿಂದ ಅದರಲ್ಲಿ ೩೦ ಅಂಶಗಳಿರುತ್ತವೆ.

[illegible] ಇದೇ ರಾಶಿಚಕ್ರದಲ್ಲಿ ನಮ್ಮ ಜನರು ಚುಕ್ಕೆಗುಂಪುಗಳನ್ನು ಕಲ್ಪಿಸಿ ಅವುಗಳಿಗೆ ಅಶ್ವಿನಿ ಮೊದಲಾದ ಹೆಸರುಗಳನ್ನು ಕೊಟ್ಟಿದ್ದಾರೆ. ಇವು ವಾಡಿಕೆ ಯೋನಿನಕ್ಷತ್ರ*ವೆಂದು ಕರೆಯಲ್ಪಡುತ್ತವೆ. ಒಂದೊಂದು ರಾಶಿಯಲ್ಲಿ ೨¼ ನಕ್ಷತ್ರಗಳು ಬರುವ ವಿಸ್ತಾರವೇ ಇರುತ್ತದೆ.

ನಕ್ಷತ್ರಗಳ ಹೆಸರು	ಒಂದೊಂದರಲ್ಲಿ ಚುಕ್ಕೆಗಳು	ಆಕಾರ.
೧ ಅಶ್ವಿನೀ	೩	ಕುದುರೇ ಮೋರೆ
೨ ಭರಣೀ	೩	ಯೋನಿರೂಪ.
೩ ಕೃತ್ತಿಕಾ	೬	ಕತ್ತಿಯ ಹಾಗೆ—
೪ ರೋಹಿಣೀ	೫	ಬಂಡಿಯ ಹಾಗೆ—
೫ ಮೃಗ	೩	[illegible]ಯ ಮೋರೆ.
೬ ಆರ್ದ್ರಾ	೧	ಮಣಿಸದೃಶ—

[illegible]

* ಈ ಕಲ್ಪನೆಯು ಈ ಕಾಲದಲ್ಲಿ ಮಾತ್ರ ೭ ವಿಶೇಷ ಮುಂಜಿಗಳ[illegible]

೭ ಪುನರ್ವಸು " " ೪ " " ಮನೆಯಾಕಾರ-

೮ ಪುಷ್ಯ " " ೩ " " ಬಾಣಾಕಾರ—

೯ ಆಶ್ಲೇಷಾ " " ೫ " " ಚಕ್ರಾಕಾರ.

೧೦ ಮಘಾ " " ೫ " " ಗೃಹಾಕಾರ.

೧೧ ಪೂರ್ವಾ " " ೨ } " ಮಂಚಾಕಾರ.
೧೨ ಉತ್ತರಾ " " ೨ }

೧೩ ಹಸ್ತ " " ೫ " ಕೈಯಾಕಾರ....

೧೪ ಚಿತ್ರಾ " " ೧ " ಮುತ್ತು.

೧೫ ಸ್ವಾತೀ " " ೧ " " ಹವಳ.

೧೬ ವಿಶಾಖಾ " " ೪ " " ತೋರಣ.

೧೭ ಅನುರಾಧಾ " " ೪ " " ಬಲಿಯಾಕಾರ.

೧೮ ಜ್ಯೇಷ್ಠಾ " " ೩ " " ಕುಂಡಲ.

೧೯ ಮೂಲ " " ೧೧ " " ಸಿಂಹಪುಚ್ಛ.

೨೦ ಪೂರ್ವಾಷಾಢಾ " ೨ " " ಆನೇಹಲ್ಲು.

೨೧ ಉತ್ತರಾಷಾಢಾ " ೨ " " ಕುಂಚ.

೨೨ ಶ್ರವಣಾ " " ೩ " " ತ್ರಿಕೋಣ.

೨೩ ಧನಿಷ್ಠಾ " " ೪ " " ಮೃದಂಗ.

೨೫ ಪೂರ್ವಾಭಾದ್ರಪದಾ	— ೨ —		ಮಂಚ
೨೬ ಉತ್ತರಾಭಾದ್ರಪದಾ	" ೨ "		ಗೋಸಿಂಹ
೨೭ ರೇವತೀ	" ೩೨ "		ಮೃದಂಗ.

೧೯ ಉತ್ತರಧ್ರುವ ನಕ್ಷತ್ರದ ಸುಳಿವಲ್ಲಿ ಉತ್ತರ ಸಪ್ತರ್ಷಿ [illegible] ಧ್ರುವ (ಕ್ರ [illegible]) [illegible] ಉತ್ತರಧ್ರುವ [illegible] ಉತ್ತರ ನಕ್ಷತ್ರ [illegible] ಅಥವಾ [illegible] [illegible]

ಶಾಲಾಪತ್ರಿಕೆ.

ಪುಸ್ತಕ ೧

ಬೆಳಗಾವಿ. ಮಾಹೆ ಏಪ್ರೀಲ ೧೮೬೭

Education

ಶಿಕ್ಷಣವು.

ಪುನರಾವರ್ತನವು.

ಕಲಿಸಿದ ವಿಷಯವನ್ನು ಪುನಃ ಆವೃತ್ತಿ ಮಾಡಿಸುವದೇ
ಪುನರಾವರ್ತನವು. ಪುನರಾವರ್ತನವು ಶಿಕ್ಷಣದಮುಖ್ಯ
ಸ್ಥಾನಿರುತ್ತದೆ. ಆದಕಾರಣ ಪುನರಾವರ್ತನಕ್ರಮವು ನಮ್ಮ ಶಾ-
ಲೆಗಳಲ್ಲಿ ನಡೆಯತಕ್ಕದ್ದೋ ರೀತಿಯು ವದಿಲ್ಲೆಂದು ನೋಡಿ-
ಖೇದಪಡುತ್ತೇವೆ. ಈ ವಿಷಯವನ್ನು ಕುರಿತು ಯಿಸ್ ಎಲವರ್ಥ
ಯಿಂಬವರು ಹೇಳುವದೇನೆಂದರೆ.

ಪುನರಾವರ್ತನದಿಂದ ಎಲ್ಲ ಕಲಿಸುವದು ಸುಲಭವಾಗು-
ತ್ತದೆ. ಅಭ್ಯಾಸದಿಂದ ವಿಚಾರ ಮಾಡುವ ಶಕ್ತಿ ಹೆಚ್ಚಾಗುವದು-
ಯಾಗುತ್ತದೆ. ನಾವು ನಮ್ಮ ಮನಸ್ಸಿಗೆ ಅಭ್ಯಾಸಂಗಿಕಕ್ಕೆ ಬೇಕಾ-
ದ್ದನ್ನು ಕಲಿಸಬಹುದೆಂಬದಾಗಿ ಪುನರಾವರ್ತನದಿಂದ ತಿಂದು

ಪಾಠವು ಸುಲಭವಾಗುವ ಮಟ್ಟಿಗೂ ಮಾರ್ಗಪ್ರತೀಕ್ಷೆಯ
ನ್ನು ಮಾಡಬೇಕು. ತದನಂತರ ಮುಂದಿನ ಪಾಠ ವಿಷಯ
ವನ್ನು ಕಲಿಯತೊಡಗಬೇಕು. ಈ ಪುನರಾವರ್ತನದಿಂದ
ಉಂಟಾಗುವ ಲಾಭವು ನರ್ತನ ಮೊದಲಾದ ಶಾರೀರಕ್ರಮ
ಗಳಲ್ಲಿ ಬಹು ಸ್ಪಷ್ಟವಾಗಿ ಕಾಣುತ್ತದೆ. ಬಾಂಜು ಪೆಟ್ಟಿ, ಅಥ-
ವಾ ಕೋಲಾಟ ಇವುಗಳಲ್ಲಿ ಹೊಸ ವಿಷಯಗಳನ್ನು ಕಲಿ-
ಯುವಾಗ ಯಾವ ನರಗಳಿಗೆ ಚಲನೆ ಕೊಡಬೇಕೆಂದು ಮೊದ-
ಲಿಗೆ ತಿಳಿಯುವದಿಲ್ಲ. ಇದೇ ಮೇರೆಗೆ ಯಾವ ನರಗಳಿಗೆ ವಿ-
ಶ್ರಾಂತಿ ಕೊಡತಕ್ಕದ್ದಾಗಿದೆ ಎಂಬುದು ಸಹ ಮೊದಲನೆ ತಿಳಿಯು
ವದು ಕಷ್ಟವಾಗಿರುತ್ತದೆ. ಈ ಅಭ್ಯಾಸಿಗರು ಮೊದಲಿಗಾಗಿ ತಮ್ಮ
ಸ್ವಾಧೀನದಲ್ಲಿರುವ ನರಗಳನ್ನು ಸಾಧಾರಣವಾಗಿ ಮೊದಲಲ್ಲಿಯೇ
ಯೋಜಿಸುತ್ತಾರೆ, ಆದರೆ ಅವರು ಕಲಿಯುವದರಲ್ಲಿ ಅಂಥಾ
ನರಗಳ ವ್ಯಾಪಾರವು ಒಂದೊಂದು ವೇಳೆ ಎಷ್ಟು ಮಾತ್ರವೂ
ಬೇಕಾಗಿರುವದಿಲ್ಲ. ಅಭ್ಯಾಸದಿಂದ ವಶಮಾಡಿಕೊಳ್ಳುವದು-
ಟ್ಟಿಗೂ ಅತಿ ಸುಲಭವಾದ ಸಂಗತಿ ಸಹ ಬಹು ಕಠಿಣವಾಗಿ ಕಾ-
ಣುತ್ತದೆ. ಹೀಗೆ ಇಲ್ಲದ್ದರಿಂದ ನಂಮ ಪಾದಪ್ರಾಣಗಳು
ನಮ್ಮ ಇಚ್ಛಾನುರೋಧವಾಗಿ ಆಗುವದಿಲ್ಲೆಂದು ನಮಗೆ ತಿಳಿ
ಯುತ್ತದೆ. ಆದದರಿಂದ ಅವಶ್ಯಕವಿದ್ದದಕ್ಕಿಂತ ಹೆಚ್ಚು

ಮೆಯನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಸಾಮರ್ಥ್ಯದ ಕೆಲಸವಿಲ್ಲ, ನೀನು ಅಷ್ಟು ಬಲ ತೋರಿಸುವ ಪ್ರಯೋಜನವೇನೂ ಇಲ್ಲ, ನೀನು ಇಷ್ಟು ಕಷ್ಟಪಡುವ ದುಪಡ ಅಗತ್ಯವಿಲ್ಲ, ಈ ಮೇರೆಗೆ ನರ್ತನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಆರಂಭದಲ್ಲಿ ಬಹು ಕಷ್ಟಪಟ್ಟು ಅತ್ತಿತ್ತ ಕುಣಿಯುವ ಯತ್ನ ಮಾಡುತ್ತಿರುವಾಗ ಹೇಳುತ್ತಾರೆ.

ಇದೇ ಮೇರೆಗೆ ಮಾನಸಿಕ ಶ್ರಮಗಳಲ್ಲಿ ಸಹ ನಮಗೆ ಹೊಸದಾಗಿದ್ದ ವಿಷಯಗಳನ್ನು ಕಲಿಯುವಾಗ ನಾವು ಸಾಧಾರಣವಾಗಿ ಅಗತ್ಯವಾಗಿದ್ದಕ್ಕಿಂತ ಹೆಚ್ಚು ಶ್ರಮ ತೆಗೆದುಕೊಳ್ಳುತ್ತೇವೆ. ಅದರಿಂದ ಏನು ಲಾಭ ಪಡಕೊಳ್ಳದೆ ನಾವು ಬೇಗ ದಣಿಯುತ್ತೇವೆ. ಹುಡುಗರಿಗಂತು ಅನೇಕ ವಿಷಯಗಳಲ್ಲಿ ಹೊಸಬರಾಗಿದ್ದರಿಂದ ಅವರು ಅನಾವಶ್ಯಕವಾದ ಶ್ರಮಗಳಿಂದ ಬಹು ಬೇಗ ದಣಿಯುತ್ತಾರೆ. ಇಂಥಾ ಪ್ರಸಂಗಗಳಲ್ಲಿ ಶಿಕ್ಷಕನು ಬೇರೆ ವಿಷಯಗಳನ್ನು ಕುರಿತು ಸಂಭಾಷಣೆಯನ್ನು ಉಪಕ್ರಮಿಸಿ, ಮೊದಲಿನ ವಿಷಯದ ಚಿಂತನೆಯಲ್ಲಿ ಆ-ಸಕ್ತವಾದ ಬಾಲಕರ ಮನಸ್ಸನ್ನು ವಿಶ್ರಾಂತಿಪಡಿಸಬೇಕು. ಶಿಕ್ಷಕನು ತನ್ನ ಮುಖಚರ್ಯೆಯಲ್ಲಿಯೂ, ನಡತೆಯ-ಲ್ಲಿಯೂ ಯಿಷ್ಟು ಮಾತ್ರವೂ ಪ್ರಯಾಸವನ್ನು ತೋರಿಸದೆ,

ತನ್ನಲ್ಲಿ ಪ್ರೀತಿಯು, ಅಥವಾ ತಿರಸ್ಕಾರದ ಭಯವನ್ನು ಬಾಲಕರ ಮನಸ್ಸಿನಿಂದ ಪರಿಹರಿಸಬಹುದು. ಅವನು ಹೀಗೆ ಬೋಧಿಸಬಹುದು—ನಿನ್ನ ಮುಂದಿರುವ ವಿಷಯವು ಕೇವಲ ಅಂತರವಿದೆ ತರ್ಕಂಭಾಷ್ಯೇನು ಅಲ್ಲ; ನೀನು ಮೊದಲಿಗೆ ಮಾಡಿದ ಯತ್ನದಿಂದ ನೀನು ಆ ವಿಷಯವನ್ನು ತಿಳಿದುಕೊಳ್ಳಸಮರ್ಥನಾಗಿದ್ದಪ್ಪರೆ, ನಿನ್ನ ಮಿತ್ರರುಗಳಲ್ಲಿ ನಿನ್ನ ಯೋಗ್ಯತೆಗೆ ಹಾನಿ ಬರಲಾರದು; ದೃಢನಿಶ್ಚಯದಿಂದ ನೀನು ಈಗ ವಿಪತ್ತೆಂಡೆಕೆಗಳನ್ನು ದೂರ ಮಾಡಿಕೊಳ್ಳುತಿ; ನೀನು ಈ ವಿಷಯವನ್ನು ಈಹೊತ್ತು ತಿಳಿದುಕೊಂಡರೂ, ನಾಳೆ ತಿಳಿದುಕೊಂಡರೂ ಅದರಲ್ಲಿ ಭೇದವೇನೂ ಇಲ್ಲ. ಇಂಥಾ ವಿಚಾರಗಳಿಂದ ಆ ಬಾಲಕನ ಮನಸ್ಸಿನ ಚಡಪಡಿಕೆಯನ್ನು ಶಾಂತಪಡಿಸಿ, ತನ್ನ ವಿಷಯವಾಗಿ ಅವನ ಮನಸ್ಸಿನಲ್ಲಿ ಉಂಟಾದ ತಿರಸ್ಕಾರವನ್ನು ಹಿಂಮೆಟ್ಟಿಸಬಹುದು.

ಬಾಲಕರು ಕಲಿತ ವಿಷಯವು ಅವರಿಗೆ ಚನ್ನಾಗಿ ತಿಳಿಯಬೇಕೆಂಬ ಉದ್ದೇಶದಿಂದ ಮುಖ್ಯವಾಗಿ ಪುನರಾವರ್ತನವನ್ನು ಮಾಡಿಸಬೇಕು. ಆದರೆ ವಿಚಾರಶಕ್ತಿಗೆ ಚಲನೆ ಕೊಡುವುದನ್ನು ಸ್ವಲ್ಪ ಮಾತ್ರವೂ ಆಲೋಚಿಸದೆ ಬಾಲಕರ ಸ್ಮರಣದಲ್ಲಿ ಶಬ್ದಗಳ ಭಾರವನ್ನು ಮಾತ್ರ ಸಂಗ್ರಹಿಸುವ ಉದ್ದೇಶವಾಗಿಸು

ನಡೆವರ್ತನವನ್ನು ಮಾಡಿಸುವದು ವಾಡಿಕೆಯಾಗಿದೆ. ಬಾಲಕರಿಗೆ ಶಾಸ್ತ್ರಪಾಠವು ಅವರಿಗೆ ಮೊದಲನೆ ಸಾರಿ ಚನ್ನಾಗಿ ತಿಳಿಯುತ್ತಿದ್ದರೆ, ಶಿಕ್ಷಕನು ಎರಡನೆ ಸಾರಿ ಆ ಪಾಠವನ್ನು ತಿಳಿಸಿಕೊಡುವಲ್ಲಿ ಹೊಸ ಯುಕ್ತಿಯನ್ನು ಯೋಜಿಸಬೇಕು. ಹೀಗೆ ಮಾಡುವದರಿಂದ ಕಲಿತದ್ದನ್ನೇ ಪುನಃ ಪುನಃ ಕಲಿಯುವದ ಬೇಸರಿಕೆಯುಂಟಾಗದೆ ಆ ಪಾಠಕ್ಕೆ ಹೊಸ ಸ್ವರೂಪವುಂಟಾಗಿ ಅದು ಬಾಲಕರ ಮನಸ್ಸಿಗೆ ಸುಬೋಧವಾಗುವದು.

ಮಿಸ್ ಎಜವರ್ಥ-ಳು ಹೇಳುವದೇನಂದರೆ.

ಯಾವದೊಂದು ಹೊಸ ಪಾಠ ಕಲಿಸುವಾಗ ತತ್ಸಂಬಂಧವಾದ ಶಬ್ದಗಳೂ, ವಿಚಾರಗಳೂ ವಿದ್ಯಾರ್ಥಿಗಳಿಗೆ ಪರಿಚಯವಾಗುವವರೆಗೆ ಅವುಗಳನ್ನು ಪುನಃ ಪುನಃ ಉಚ್ಚರಿಸುವಲ್ಲಿ ಬೋಧಕನು ಬೇಸರಪಡಬಾರದು. ಆದಾಗ್ಯೂ ವಿದ್ಯಾರ್ಥಿಗಳ ಶಕ್ತಿಗೂ, ಸ್ವಭಾವಕ್ಕೂ ಅನುರೂಪವಾಗುವ ಹಾಗೆ ಎಷ್ಟು ಸಾರೆ ಪುನರಾವರ್ತನ ಮಾಡುವದು ಶಕ್ಯವೆಂದು ನೋಡಿ ಅಷ್ಟೇ ಸಾರಿ ಮಾತ್ರ ಮಾಡಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳ ಲಕ್ಷ್ಯವನ್ನು ದೃಢಪಡಿಸುವದಕ್ಕೆ ಬದಲಾಗಿ ಅದನ್ನು ಚಂಚಲಪಡಿಸುವನು. ಒಂದು ಪಾಠವು ಅವರಿಗೆ ಮನಮುಟ್ಟಿದನಂತರ ಅದನ್ನು ಇನ್ನೂ ವಿಶೇಷ ಸ್ಪಷ್ಟಪಡಿ-

ಸುವ ಬಗ್ಗೆ ಯತ್ನ ಮಾಡಬಾರದು. ಒಂದು ವಿಷಯವು ಪೂರ್ಣವಾಗಿ ತಿಳಿದನಂತರ ಅದರ ಸಂಬಂಧದ ಉದಾಹರಣೆಗಳನ್ನು ಕೊಟ್ಟರೂ ಪ್ರಯೋಜನವಿಲ್ಲ. ಶಿಕ್ಷಕನು ಹೇಳಿದ್ದು ವಿದ್ಯಾರ್ಥಿಗಳಿಗೆ ಯಾವಾಗ ಚನ್ನಾಗಿ ಬೋಧವಾಗುತ್ತದೋ ಆ ಸಮಯವನ್ನು ತಿಳಿದುಕೊಳ್ಳುವದು ಶಿಕ್ಷಣದಲ್ಲಿ ಬಹು ಕಠಿಣವಾದ ಸಂಗತಿಯಾಗಿರುತ್ತದೆ. ಅಂಥಾ ಸಮಯವನ್ನು ಸೂಕ್ಷ್ಮದೃಷ್ಟಿಯಿಂದ ಗೊತ್ತುಹಿಡಿದು ಅದರ ನಂತರ ಪುನರಾವರ್ತನವನ್ನು ನಿಲ್ಲಿಸಬೇಕು. ಸೂಕ್ಷ್ಮದೃಷ್ಟಿಯುಳ್ಳ ಬೋಧಕನಿಗೆ ವಿದ್ಯಾರ್ಥಿಗಳ ಮುಖಚರ್ಯೆ, ಕಣ್ಣು, ಧ್ವನಿ, ನಡತೆಗಳಿಂದ ತಾನು-ಹೇಳುವದು ಅವರಿಗೆ ತಿಳಿಯಿತೆಂದು ಗೊತ್ತು ಹತ್ತಬಹುದು. ಆದರೆ ತನ್ನ ಸ್ವಂತ ವಿಚಾರಗಳಲ್ಲಿ ಮುಳುಗಿಹೋದ ಶಿಕ್ಷಕನು ವಿದ್ಯಾರ್ಥಿಗಳ ಮುಖಗಳನ್ನು ನೋಡಿ ಅವರ ಮನೋಗತವನ್ನು ತಿಳಿದುಕೊಳ್ಳಲೆತ್ನಿಸುವದಿಲ್ಲ. ಅವನು ವಿದ್ಯಾರ್ಥಿಗಳ ಸ್ಥಿತಿಯನ್ನು ಲಕ್ಷಿಸದೆ ಕುರುಡನು ಹಗ್ಗಹೊಸೆದ ಹಾಗೆ-ತಾನು ಮೆಚ್ಚಿಕೊಂಡ ಆಲೋಚನೆಗಳನ್ನೇ ಬಡಬಡಿಸುತ್ತ ಹೋಗುವನು. ಅದರಿಂದ ವಿದ್ಯಾರ್ಥಿಗಳು ಮುದುಕತನವೂ, ಲಕ್ಷ್ಯವೂ ಹೆಚ್ಚಾಗಿ ಅವರು ಕೇವಲ ಆಲಸ್ಯಮೂರ್ತಿಗಳಾಗಿ ಕಾಣಿಸುವರು. ತೀವ್ರಬುದ್ಧಿಯುಳ್ಳವನು

ಗಹುತನ್ನ ಶಿಕ್ಷೆಯನು ಹೇಳುದನ್ನೇ ಪುನಃ ಪುನಃ ಹೇಳುತ್ತಾ-
ನೆಂದು ನೋಡಿ ಅವನ ಬೋಧನೆಯನ್ನು ಚಿಂತಿಸದೆ ತ-
ನ್ನ ಮನಸ್ಸಿಗೆ ಬಂದ ಸಂಗತಿಯನ್ನು ಕುರಿತು ಆಲೋಚಿಸುತ್ತ
ಕೂತ್ತಿರ್ತಾನೆ. ಅಸ್ತ್ರಕಲ್ಲಿ ಶಿಕ್ಷೆಯನು ಹೇಳಿದ ಯಾವಾವರೂ
ವಿಶೇಷವಾದ ಸಂಗತಿಯನ್ನು ಕೇಳಿಕೊಳ್ಳುವಲ್ಲಿ ತಪ್ಪಿದರೆ,
ಅವನು ಇನ್ನೊಮ್ಮೆ ಪ್ರಾಗಾದರೂ ಹೇಳುವನೆಂದು ಮಾ-
ಗಮಾತೀಕೆ ಮಾಡುವನು. ಶಿಕ್ಷೆಯನು ಪುನಃ ಅದನ್ನು ಉತ್ತ-
ರಿಸಿದ್ದಕೆ, ನಮುನೆ ಪ್ರಶ್ನೆಮಾಡಿ ಅದನ್ನು ತಿಳುಕೊಳ್ಳು-
ವನು. ಈ ಮೂರನೆ ಶಿಕ್ಷಕನನ್ನು ತನ್ನ ವಶದಲ್ಲಿ ನಡಿಸಿ
ಕೊಳ್ಳುವನು. ಇಂಥಾ ಹುಡುಗರಿಗೆ ತಕ್ಕ ಉಪಾಯವೇನಂ-
ದರೆ ತಾವು ಹೇಳುವ ವಿಷಯವನ್ನು ತಕ್ಕ ಮುತ್ತಿಗೆ ಬೇಸರಿಕೆ-
ಬರದ ಹಾಗೆ ಒಳ್ಳೆ ಸಕೊಳ್ಳ ನಂತರ ಅದನ್ನು ಕೇಳಿಕೊಳ್ಳುವ-
ಲ್ಲಿ ಯಾರು ಹುಡುಗರು ಪ್ರಮಾದರೆಂದು ತೋರುವದೋ,-
ಅವರಿಗೆ ಪುನಃ ಹೇಳದೆ ಪ್ರಶ್ನೆ ಮಾಡಬೇಕು. ಶ್ಶಿಗೆ ಬಂಡಿರತು
ಸಾರಿ ಹಾದಮೇಲೆ ಅವರು ಪುನಃ ಹುಡುಗ್ರ ಮಾಡಲಿ ಕ್ಕೆ-

Shabdamanidarpana

ಶಬ್ದಮಣಿದರ್ಪಣವು.

ಏಕದ್ವಿತ್ರ್ಯಾದಿಸಮಾ
ನಾಕೃತಿಯಿಂ ಪ್ರತ್ಯಯಾಂತದಿಂದಿಕಿಲುಷ್ಟವ.
ಪ್ರಾಕಾರಮನತ್ತಮನಿಕ
ನಾಕಾರಂ ಬಹುಳದಿಂ ವಿಭಕ್ತಿಗಳೆಲಂ ||೯೯||

ಅರ್ಥ— ಏಕ, ದ್ವಿ, ತ್ರಿ, ಇತ್ಯಾದಿಸಂಖ್ಯಾವಾಚಕಗಳು ಸಹಜವಾಗಿ ಲಿಂಗವಾಗವು. ಆದ್ಯಾಗಿ ಮಾಡಿ ಪಟ್ಟಿಕೊಂಡಿದ್ದರೆ ಪ್ರತ್ಯಯಾಂತಗಳಾದರೆ ಅವುಗಳಿಗೆ ಲಿಂಗಮಕ್ಕುಂ.— ಸಂಸ್ಕೃತದ ಊಕಾರಾಂತಶಬ್ದಗಳು ಕನ್ನಡದಲ್ಲಿ ಹ್ರಸ್ವ ಏಕಾರಾಂತವಾಗಲಿ, ಅಕಾರಾಂತವಾಗಲಿ ಆದನಂತರ ಅವುಗಳಿಗೆ ವಿಭಕ್ತಿಗಳನ್ನು ಹತ್ತಿಸಬಹುದು. ಉದಾ— ಏಕಾಂಗ, ದ್ವಿಮುಖ, ತ್ರಿಲೋಕ; ದ್ವಿತೀಯ, ತ್ರಿತಯ, ಚತುಷ್ಟ; ಮಾಲೆ, ಬಾಲೆ, ಶಾಲೆ, ಲತೆ, ಉತ್ಪ್ರೇಕ್ಷ, ಕರುಣ, ದಂಷ್ಟ್ರ, ವಾಯಕ, ಇ.

ಊಡಂ ಹ್ರಸ್ವೋದಂತಮ
ನಾದತ್ತುಂ ಹ್ರಸ್ವಮೆನಿಪ್ಪುದಂತಂ ||
ಜ್ಯಾದಿಸಮಸ್ತ್ಯಾಕ್ಷರ
ಮಾದವಿಕೃತಿಶಬ್ದಮುಕ್ತಿ ವಿಭಕ್ತಿಲಿಂಗಂ ||೧೦೦||

అర్థ- సంస్కృత ఋకారాంతమల్లద అకారాంతస్త్రీ-

త్రన్ని ఎకారాంతమాడోదు లింగమక్కుం. ఈకారాంత,

ఊకారాంతంగళ్హ్రస్వ మాడోదు లింగమక్కుం. శ్రీ

శబ్ద మొదలాద ఏకాక్షరంగళాద ఈకారశబ్దంగళ్గె ఇతె-

ఱదిం లింగమక్కువు. ఉదా — వధ, అభిలాష. ఉదా-

హరణ, దభ్రప్రెక్ష, ఊఢ, అల్లర, ఎంబువదె, అభి-

లాష. ఎంబంతె ఎకారాంతమాడోదు లింగమక్కువు.

లక్ష్మీ గౌరీ నారస్త్రీభూమివీణ్యత్యాది ఈకారాంత

గళూ, శ్వశ్రూ, శంభూ, స్వయంభూ ఇత్యాది ఊకారాం

తంగళూ లక్ష్మి, గౌరి, శ్వశ్రు, శంభు ఎంబంతె హ్రస్వాంత

మాడోదు లింగమక్కుం, శ్రీ, మా, హ్రీ, స్త్రీ, భ్రూ, గీ

ఇవు మొదలాద ఏకాక్షర శబ్దంగళు ఇదీతెఱదిం విభ-

క్తియంతెవడె

అత్యాంతము ఇత్యాంతము
ముత్యాంతము మా ఋ రంతము . నిజలింగ॥
ఏముత్రకారాదేకము.
దత్తంతీన్సంవిధాత్ర శబ్దంతాంతం॥ ౧౨॥.

అర్థ- అ, ఇ, ఉ, ఋకారాంతంగళ్గె పూర్వ-

ತ: ಅಂಗಮಪ್ಪುವು. ಉದಾ - ಭುವನ, ಭವನ, ಕೀರ್ತಿ; ಸ್ತ್ರೀ-
ತಿ ರವಿ, ಗಿರಿ, ಮುನಿ; ಪಶು, ಶಿಶು, ದಾರು; ಪಿತೃ, ಪೌತ್ರ, ಕರ್ತೃ,
ಇತ್ಯಾದಿ. ಹಿಂದಿನ ಪ್ರಕರಣದಿಂ ಋಕಾರಾಂತಕ್ಕೆ ಆಕಾರಾದೇಶವೂ
ಗಿ ಸವಿತಾರ, ಹೋತಾರ, ಕರ್ತಾರ, ಭರ್ತಾರ, ದಾತಾರ, ಜೇತಾರ ಎಂ
ದು; ಧಾತ್ರಿ ಎಂದು ಪ್ರಯೋಗಮುಂಟು. ವಿಧಾತೃ
ಸ್ತ್ರೀ ವಿಕಲ್ಪದಿಂ ಹ್ರಸ್ವಾಂತಮಕ್ಕುಂ. ಅಧಾತ್ರಿ ಎಂದು ಪ್ರಯೋಗ
ಮುಂಟು.

ವ್ಯಂಜನಮುಳ್ಳ ಸಂಸ್ಕೃತದ
ವ್ಯಂಜನಾಂತಲಿಂಗಂಗಳ್ ತಮಂ ದ್ವಿತ್ವಮನ್
ತ್ಯಜಿ ಯೋಗಮನಂತ್ಯದ
ಕನೆಮಂ ಮುನ್ನೊತ್ತಕ್ಷರಕ್ಕಿಟ್ಟು ಅಂಗ ||೧೪||

ಅರ್ಥ - ಸಂಸ್ಕೃತದ ವ್ಯಂಜನಾಂತಶಬ್ದಂಗಳ್ ತಮ್ಮೊಳ್ ದ್ವಿತ್ವ-
ಮಂ; ದ್ವಿತ್ವಂ ಬಿಟ್ಟುದರ ಉತ್ತರಪದಮಂ; ಅಂತ್ಯವ್ಯಂಜನಕ್ಕೆ
ಯೋಗಮಂ ಪಡೆದು, ಅಂಗಮಕ್ಕುಂ. - ಉದಾ - ವ್ಯಂಜನಾಂತ
ಕ್ಕೆ ಅನಾರ್ಷ ಉದಹರಣೆಗಳು, ದಿವ್, ಸ್ರಜ್, ಚತುರ್, ಮರುತ್,
ಗರ್ಭ, ಕಕುಭ್, ಗೀರ್ವಾಣ್, ವಾಕ್, ಸಾಮವಿದ್, ಸುಗ
ಭಾಜ್, ವಿಹಾಯಸ್, ಸಂಪತ್, ಇವು ಮೊದಲಾದವುಗಳಿಗೆ
ದಿವ, ಸ್ರಜ, ಚತುರ, ಎಂಬತೆ ಅಕ್ಷರಮಾಲೆ;

ಕಜ್, ಅಕ್, ಕ್ಷುತ್, ತ್ರಿವಿಷ್, ಸಂಯತ್, ಋಕ್, ಯಜುಸ್
ವಿದ್ಯುತ್, ತ್ವಿಷ್, ಪ್ರಾವೃಷ್, ಮರುತ್, ವಾಕ್, ಇವು ಮೊದ-
ಲಾದ ವ್ಯಂಜನಾಂತಗಳ್ಗೆ ಕಜ್ಜು, ಅಕ್ಕು, ಕ್ಷುತ್ತು ಎಂಬಂತೆ
ಉತ್ವಬೆರಸಿ ದ್ವಿತ್ವಮಾದುದು; ರಾಜನ್, ಮೂರ್ಧನ್, ಅ
ರ್ಯಮನ್, ಮಘವನ್, ಶ್ವನ್, ಧಾಮನ್, ಸೀಮನ್, ಊಷ್ಮನ್
ಕರ್ಮನ್, ಚರ್ಮನ್, ಬ್ರಹ್ಮನ್, ಅಧ್ವನ್, ಯುವನ್, ಪ್ರಾಯನ್
ತ್ರಿಯನ್, ಇವು ಮೊದಲಾದ ನ್ವ್ಯಂಜನಾಂತಂಗಳ್ಗೆ ರಾಜ, ಮೂ
ರ್ಧ, ಅರ್ಯಮ, ಮಘವ, ಎಂಬಂತೆ ಅಂತ್ಯಲೋಪ ಮಾದಿ
ವಂಬಂಗಳಪ್ಪುವು. ಸೀಮೋಷ್ಮಂಗಳ ಅದತತೆಗೆದ ಕಲ್ಪ-
ದಂತೆ ಸೀಮೆ, ಊಷ್ಮೆ, ಎಂದು ಎತ್ವಮಕ್ಕುಂ - ಮೋಸಂಬು
ದಿ. ಸಾಂತದಲ್ಲಿ ಯಶ, ಯಶಸ್ಸು, ತೇಜ, ತೇಜಸ್ಸು, ವಚ
ವಯಸ್ಸು, ಮನ, ಮನಸ್ಸು,   , ಶ್ರೇಯ, ಶ್ರೇ
ಯಸ್ಸು ಎಂದುಭಯಗ್ರಾಹ್ಯವಪ್ಪುವು. ಶಕಟ ವ್ಯಂಜನಾಂತ-
ಮಾಗಿ ಕೆಲವು ಇಷ್ಟಾಂವು, ವಾಕ್, ದಿಕ್, ದಿಶ್ ಶಬ್ದಕ್ಕೆ ಗಳೆಯುಂ
ಎತ್ವಮೂ ಬರುತ್ತದೆ.

ತ್ರಿಪುರಕ್ಕೆ ಯಂತ್ರಕಮಾಬಹು.
ವಚನಂಗಳ ವೇಳವದನವೃತಲಂಗಂಗಳ್ ॥
ನಿಬಿಡಂ ಸರ್ಗದೊಸ್ಟುದಂ

ಘಟಿತಜ್ಞಾತೃಳಿವೃದ್ಧಿಪನುದಾಹೃತಿಮುಖದಿಂ ||೧೮||

ಅರ್ಥ- ಸಂಸ್ಕೃತಪ್ರಥಮಾಂತಪದವಚನಂಗಳ್ತಮ್ಮವಿಸ-
ರ್ಗಮಂ ಕಳೆದು ಕನ್ನಡದೊಳ್ ಪ್ರಕೃತವಚನಮಾನಿಲಿಂಗಮಕ್ಕು-
ವು. ಉದಾ — ಜ್ಞಾನಂ, ಯುವಾನಂ, ಅಭ್ಯಾಸಂ, ಪ್ರಾಯಾಣಂ,
ಪ್ರಧಾನಂ, ಭಾಸ್ವಂತಂ, ಶ್ರೀಮಂತಂ, ಹನುಮಂತಂ, ಇತ್ಯಾ
ದಿ....

ನೀನರಿ ಕರ್ನಾಟಕದೊಳ್—
ಪೀನಂ ಸ್ತ್ರೀಪುಂನಪುಂಸಕೋಭಯಪುಂಸ್ತ್ರೀ ||
ಸ್ತ್ರೀನಪ್ರಮುಖ್ಯವಾಚ್ಯ
ನಾನಾಪ್ರಿಯಮೆಂದು ಲಿಂಗಮೊಂಬತ್ತೆರಂ ||೧೯||

ಅರ್ಥ- ಕರ್ನಾಟಕಭಾಷೆಯೊಳ್ ಸ್ತ್ರೀಲಿಂಗಂ, ಪುಲ್ಲಿಂಗಂ, ನಪುಂಸಕಲಿಂಗಂ, ಪುನ್ನಪುಂಸಕಲಿಂಗಂ, ಪುಂಸ್ತ್ರೀಲಿಂಗಂ, ಸ್ತ್ರೀನಪುಂಸಕಲಿಂಗಂ, ತ್ರಿಲಿಂಗಂ; ವಾಚ್ಯಲಿಂಗಮೆಂದು ವಿಶೇಷ್ಯಾಧೀನಲಿಂಗಂ, ಅಪ್ರಿಯಲಿಂಗಂ, ಎಂದೊಂಬತ್ತೆರಂ- ಉದಾ — ಸ್ತ್ರೀ, ಅರಸಿ, ದೇವಿ; ಪುಂ, ಅರಸಂ, ದೇವಂ; ನಪುಂ, ಕನ್ನಡಿ, ಕಳಸಂ, ಜಡೆ, ಕೊಪ್ಪು, ಪುನ್ನಪುಂ, ಕವಿಮೂಡಿದಂ, ಕವಿಮೂಡಿದುದು, ಚಂದ್ರ ಮೂಡಿದಂ, ಚಂದ್ರ ಮೂಡಿದುದು, ಮಂಗಳನಿವಂ.

ಮಂಗಳವಿದು, ಗ್ರಹಂಗಳೆಲ್ಲಮುನ್ನಪುಂಸಕಲಿಂಗಂಗಳ್, ಆಳ್,
ಅಂಕ, ಬಸಂತಂ, ಮಲಯಾನಿಲಂ, ಕಾಮಂ, ಇವೆಲ್ಲಮುನ್ನಪುಂ
ಸಕಂಗಳು; ಪುಂಸ್ತ್ರೀ, ಇವರ್ಪುರುಷರ್, ಇವರ್ಸ್ತ್ರೀಯರ್,
ಅವರಗಂಡಸರ್, ಅವರ್ದೇವಿಯರ್, ತ್ರಾಕ್ಷಿಂಬುದುಇದ-
ರಂತಿ; ಸ್ತ್ರೀನಪುಂ, ಆಪೇಣ್ಜಾಣೆ, ಅವೇಣ್ಟಿಂದುದು,
ಆಕನ್ನಿಕೆಲ್ಲಕನ್ಯೆ, ಸುಕನ್ನಿಕೆಮೊಲ್ಲದು, ಸರಿ, ಸರಸ್ವತಿ,
ದೇವಿ ಎಂಬಿವುಸ್ತ್ರೀನಪುಂಸಕಂಗಳ್; ತ್ರಿಲಿಂಗಕ್ಕೆ, ನೀನರಸಂ,
ನೀನರಸಿ, ನೀಂಪೆಸ್ತು, ನೀನ್, ಆನ್, ತಾನ್, ಕಿಸು, ಹಸುಳೆ,
ಮಗುವು, ಕೂಸು, ಸೊಂಡಿ, ಕಿರಿ, ಕಳ್ಳೆ, ಎಂಬಿವುತ್ರಿಲಿಂಗಂ
ಗಳ್; ವಾಚ್ಯಲಿಂಗಕ್ಕೆ, ನೆಕಿದನಿವಂ, ನೆಕಿದಳಿವಳ್, ನೆರಿತ್ತ-
ದು, ಅಭಿಮಾನಿ, ದಾನಿ, ಸಾಧು, ಹಠಣ, ಚಂಡಿ, ಹೇಡಿ,
ಇವುಮೊದಲವುಚಿಕೇಷ್ಯಾಧೀನಲಿಂಗಂಗಳ್; ಅವ್ಯಯಲಿಂಗಂ
ಗಳ್, ಕಣ್ಣಿದಂ, ಕಣ್ಣಿದಳ್, ಕಣ್ಣಿತು, ಭಾಂಕನೆ, ತ್ರೊಳ್ಳನೆ,
ಮೆಲ್ಲನೆ, ಕಮ್ಮನೆ, ಇಮ್ಮನೆ, ಸುಮ್ಮನೆ, ಬಿಯ್ಯನೆ, ಕಟ್ಟನೆ,
ಪಟ್ಟನೆ, ತಳ್ಳನೆ; ಬೆಳ್ಪಂ, ಬಟ್ಟರಂ.

ಬಹುಸಾನ್ನಾನಂಬು

ತ್ರಿಗಳುಂ ಹಣವಟನವವರ್ಣಾಮಬಹುತ್ರೀ॥

ಗಳುಂ ಕೃತ್ತ್ವಿತ -

ಪ್ರಸಜ್ಯಂ ನಿಕರಾಖ್ಯಾಲಿಂಗಮ ಬಿತ್ತ್ರಮಂ ॥ ೮ —

ಅರ್ಥ — ನೀನ್, ಆನ್, ತಾನ್, ಎಂಬಿವುಂ; ಗುಣವಚನಮುಂ, ಸರ್ವನಾಮಮುಂ; ಬಹುವ್ರೀಹಿ, ಕೃತ್ತುಂ; ತದ್ಧಿತಮುಂ; ಸಂಖ್ಯೆಯುಂ ಯಥೇಷ್ಟಾರ್ಥಲಿಂಗಮಂ ಮೂರುಂಬಿಡಿಯುಂ ಅರಿವುದು. ಉದಾ — ನೀಂ ರಾಮಂ, ನೀಂ ಸೀತೆ, ನೀಂ ಗಿಳಿ, ಆಂ ಶಿವಂ, ಆಂ ಗೌರಿ, ಆಂ ನಂದಿ; ತಾನವಂ, ತಾನವಳ್, ತಾನದು; ಗುಣವಚನ, ಇನಿಯಂ, ಇನಿಯಳ್, ಇನಿಯದು; ಸರ್ವನಾಮಕ್ಕೆ, ಪೆರಂ, ಪೆರಳ್, ಪೆರತು; ಬಹುವ್ರೀಹಿ, ಅವಂ ಕುಸಿಗೊರಲಂ, ಅವಳ್ ಕುಸಿಗೊರಲೆ, ಅದು ಕುಸಿಗೊರಲ್; ಕೃತ್ತಿಗೆ, ಪಾಡಿದಂ, ಪಾಡಿದಳ್, ಪಾಡಿದುದು; ತದ್ಧಿತಕ್ಕೆ, ಒದಾಳ್ಗಿಯವಂ, ಒದಾಳ್ಗಿಯವಳ್, ಒದಾಳ್ಗಿಯದು; ಸಂಖ್ಯೆಗೆ, ಸಾಯಿರವೆಂದರ್, ಸಾಯಿರ ಕುದುರೆಗಳ್.

ಮೊದಲಪದಪ್ರಯೋಗಂ.

ಸಂಸರ್ಗವಿಭಕ್ತಿಗಂ ತ್ರಿಲಿಂಗಕ್ಕಂ ತಾಂ ॥
ಸಂಪದದ ತ್ರಿತಯಕ್ಕೆ
ಸಂಯೋಜಿಸಿ ಬಾರಮುಪ್ಪುದರ್ಥದ ವಿಭಾಗ ॥ ೧೯ ॥

ಅರ್ಥ — ಅವ್ಯಯಲಿಂಗಮುಮುದು ಸರ್ವವಿಭಕ್ತಿಗಂ, ಮು

ಸ್ತ್ರೀನಪುಂಸಕತ್ವಂ, ಏಕದ್ವಿಬಹುವಚನತ್ವಂ, ಸಂಯೋಗಿ
ದ್ರವ್ಯತ್ವವಾಚಕಂ. ಉದಾ — ಅರಸಂ
ಎಂಬಲ್ಲಿ ಸ್ವರೂಪಂ ಬಂದುದು ಪ್ರಥಮೆಯೆನಿಪ್ಪುದು,
ಸ್ವತಂತ್ರಂ ಕರ್ತೃ, ಕರ್ತೃವಿನ ಕರ್ಮಮೆನಿಪ್ಪುದು,
ತತ್ಸಾಧಕತಮಂ ಕರಣಂ, ಕರ್ಮದಿಂ ಸಂಪ್ರದಾನಂ,
ಅಪಾದಾನಂ ಸ್ವಸ್ವಾಮಿಸಂಬಂಧಂ ಆಧಾರಂ,
ಎಂಬ ಷಟ್ಕಾರಕಂಗಳು ಸಂಬೋಧನಂ ಸಹಿತ-
ಮೇಳು. ದ್ವಿತೀಯೆ ಮಾಡಿದನೆಂಬಲ್ಲಿ ದ್ವಿತೀಯೆ ಮಾಡಿದನೆ-
ಂಬಲ್ಲಿ ಯೆನಿಪ್ಪುದು. ಅಂತೆಂದೆಂಬಲ್ಲಿ ಬಂದಿತು-
ಉ. ಅದರಿಂದೆಂಬ ತೃತೀಯೆಯೆನಿಪ್ಪುದು. ಕೊಟ್ಟನ, ಕೊಟ್ಟ
ನೆ, ಬಗೆಯೆನೆಂಬಲ್ಲಿ ಚತುರ್ಥಿಯೆನಿಪ್ಪುದು. ಮತ್ತಮೆಂಬ
ಲ್ಲಿ ಷಷ್ಠಿಯೆನಿಪ್ಪುದು. ತ್ರಿಲಿಂಗಕ್ಕೆ, ಮತ್ತೆ ಸೋದರಂ, ಮತ್ತೆ
ಹೋದರ್, ಮತ್ತೆ ಸೋದುದು. ಪಂಚಮ್ಯಕ್ಕೆ, ಭೂ
ತನೋಡಿ ಬಂದಂ, ಮಲ್ಲಿ ಸಿವರ್ಮದಿರ್, ಸಪ್ತಮಿ-
ಲ್ಲಿ ಪೋದರ್.

Notice.

जाहीरात.

दक्षिण भागांतील सर्व स्कुलमास्तर यांस.

एज्युकेशनल इन्स्पेक्टर साहेब दक्षिण भाग यांजकडून. तीन महिन्यांनी शाळेंत मुलें घेत जावीं असा पूर्वी हुकूम झाला आहे. तो हुकूम उजळणी शिकणाऱ्या मुलांस लागू आहे असें समजूं नये. उजळणी शिकणारे मुलांस दरमहाचे दरमहा शाळेंत घेत जावें. कळावें तारीख १ मार्च १८६७

(Signed) W. A. Russell

एज्युकेशनल इ. द. भाग.

जाहीरात- दक्षिण भागांतील सर्व स्कुलमास्तर यांस. कसबा रामफनगुडी तालूक चिकोडी येथील मास्तर शिवाजी आपाजी यांणीं, त्या शाळेचा चार्ज घेतल्या पासून शाळेचा अभ्यास चांगला न चालवितां शाळा अगदीं खराबीस आणली. मार्च महिन्यांत आठ दिवसांची हजरी ही भरली नव्हती. असें करून आल्यावरून सदर्हू मास्तर यांचा पगार कमी करण्यांत आला आहे.

आह्मीस असें कळून येतें कीं, नार्मलस्कुलांतील विद्यार्थी बाहेर शाळेवर पाठविले जातात त्यांजला त्यांचे कराराप्रमाणें तीन वर्षें काम केलें पाहिजे तें काम तितकी मुदत न करण्याचे इराद्यानें कित्येक शिक्षक अगदीं वाईट करितात चाकरी-तीं असें कळविण्यांत येत आहे कीं, जो मास्तर शाळेचें का-म नीट रीतीनें करणार नाहीं त्याजला कराराच्या मुदती पर्यंत काम करणार हें ध्यानांत येऊन नंतर त्यास शाळेवरून काढून टाकलें जाईल. ता० ३ एप्रिल १८६७

(Signed) W. A. Russell.

इन्स्पेक्टर दक्षिण भाग.

The Examination of T. C. Students.

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಪರೀಕ್ಷೆ.

ಈ ವರ್ಷದ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಪರೀಕ್ಷೆ

ತಾ. ೨೩ ಅಕ್ತೋಬರ ತಾರೀಖಿನಿಂದ

ಮೊದಲಾಗುವದು.

ಕನ್ನಡ ವಾಚನ- ಕಥಾಸಂಗ್ರಹ ೧ನೇ ಭಾಗ, ಹಿಂದುಸ್ಥಾನದ-ಇತಿಹಾಸ, ಕನ್ನಡ ಬಾಲವ್ಯಾಕರಣ, ಕನ್ನಡ ಭಾರತ ಒಂದು ವರೆ ಅಧ್ಯಾಯ. ಮಹಾರಾಷ್ಟ್ರವಾಚನ ೪ನೇ ಪುಸ್ತಕ. ಸಂಸ್ಕೃತ ಶಬ್ದ ರೂಪಾವಳಿ, ಧಾತುರೂಪಾವಳಿ, ಮೊದಲನೇ ವಾಚನ ಪುಸ್ತಕ. ಇಂಗ್ಲಿಷ ೨ನೇ ಪುಸ್ತಕ ಭಾಗ ೨ನೇದು. ಅಂಕಗಣಿತ; ಬೀಜಗಣಿತ, ಮೂಲಸಮೀಕರಣಗಳು, ಕರಣಿ, ಯುಕ್ಲಿಡನ ೧ನೇ ಪುಸ್ತಕದ ೪೦ ಸಿದ್ಧಾಂತಗಳು. ಭೂಗೋಲ ೪ ಖಂಡಗಳೂ, ಹಿಂದುಸ್ಥಾನವೂ, ಭೂಗೋಲದ ಮೇಲಿನ ಕೃತ್ಯಗಳು ೨೦ ಮೋಠಿಕ ಭೂಪಟಗಳು ಹಿಂದುಸ್ಥಾನದ ಇತಿಹಾಸದ ಭಾಗಗಳು. ಶರೀರಶಾಸ್ತ್ರ ಪದಾರ್ಥ ವಿಜ್ಞಾನ ೩ನೇ ಪಾಠಗಳು.

೭ನೇ ವರ್ಗಕ್ಕೆ.

ಕನ್ನಡ ವಾಚನ, ಕಥಾಸಂಗ್ರಹ ೨ ಭಾಗಗಳು, ಕನ್ನಡ ಬಾಲ-ವ್ಯಾಕರಣ, ಜೈಮಿನಿ ಭಾರತ ಪ್ರತಿಗಳು. ಇಂಗ್ಲಿಷ ೨ನೇ ಪು-ಸ್ತಕದ ೧ನೇ ಭಾಗ ೩ ಪಾಠಗಳು. ಅಂಕಗಣಿತ, ಬೀಜಗಣಿತದ ಸಾಧಾರಣ ಸಮೀಕರಣಗಳ ಆರಂಭ. ಯುಕ್ಲಿಡನ ೧ನೇ ಪುಸ್ತ-ಕದ ೨೦ ಸಿದ್ಧಾಂತಗಳು. ಭೂಗೋಲ ೩ ಖಂಡಗಳು. ಶರೀರ ಶಾಸ್ತ್ರ ಪದಾರ್ಥವಿಜ್ಞಾನ ೧ನೇ ಭಾಗವು. ಹೋಲಿಸ್ ಭೂ

ಶಿನ್ನಗೆ ಹಿಂದುಸ್ಥಾನದ ಇತಿಹಾಸ ೩ ಭಾಗಗಳು.

ಮೂರನೇ ವರ್ಗ.

ಕನ್ನಡವಾಚನ, ಮೊದಲನೆಯ ಪುಸ್ತಕ, ಕಥಾಸಂಗ್ರಹ ೬೦ ಪುಟಗಳು ಕನ್ನಡವ್ಯಾಕರಣ ೪೦ ಪುಟಗಳು. ಮಹಾರಾಷ್ಟ್ರ ವಾಚನ ೪ನೇ ಪುಸ್ತಕ. ಇಂಗ್ಲಿಷ ೧ನೇ ಪುಸ್ತಕ ನಿಮ್ನ. ಭೂಗೋಲ ಏಶಿಯಾ, ಯೂರೋಪ, ಹಿಂದುಸ್ಥಾನ. ಅಂಕಗಣಿತ ಮಿಶ್ರ———ಗಾಳಟಧೋರ ಕಗ್ಗ ಹಿಂದುಸ್ಥಾನದ ಇತಿಹಾಸ ೬೦ ಪುಟಗಳು. ಸೃಷ್ಟಿಪದಾರ್ಥವಿಜ್ಞಾನ ೧೮ ಪುಟಗಳು.

ಪರೀಕ್ಷೆಯ ಪ್ರಶ್ನೆಗಳು.

ಗಣಿತ.

$$\frac{\frac{೫}{೨}+\frac{೨}{೪}+\frac{೨}{೩}}{೫};\quad \frac{.೦೫\times೧೪.೦೭೭}{.೦೦೧೫};$$

$$\frac{೧\frac{೨}{೩}-.೦೬}{\frac{೩}{}\times೧೫}\times\frac{\frac{೨}{೩}+\frac{೫}{೨}-.೭}{೫}$$

೧ ಒಬ್ಬ ಮನುಷ್ಯನು ೧೪೫ ರೂಪಾಯಿಗಳಿಗೆ ೧೫ ಮಣ ಸಕ್ಕರೆ
ಕೊಂಡು ಅದರಲ್ಲಿ ೩ ಮಣ ತನ್ನ ಮನೆಯಲ್ಲಿ ಇಟ್ಟುಕೊಂ

ಮ ೯:೪ರ ತುಪ್ಪವನ್ನು ಮಾರಿ ೫೫ ರೂಪಾಯಿ ಲಾಭ ಹೊ-
ಂದಿದನು. ಮಣಕ್ಕೆ ಎಷ್ಟು ರೂಪಾಯಿಗಳಂತೆ ಮಾರಿದ?

೩ ಕ್ಷ ಗಜ, ಅಗಲವುಳ್ಳ ಗಲ್ಲದ ಮಡಿಕೆಯಿಂದ ಎಷ್ಟು ಅಂತರ
೮ ರೂಪಾಯಿ ಬೆಲೆ ಕ್ಷ ಪಟ್ಟಿಯಿಂದ ಬಟ್ಟೆಗೆ ೭ ಕ್ಷ ರೂಪಾಯಿ ಯ-
ಪಟ್ಟಿಕೆ ಹಾಗುವದಕ್ಕೆ ಹೋದ. ಅವನು ೧೨ ಕ್ಷ ರೂಪಾಯಿ ಅವ
ನ ಕೊಂಡಕ್ಕೆ ೩ ಕ್ಷ ರೂಪಾಯಿ ನಷ್ಟವನ್ನು ತಂದ; ಅವನೇ ಇದು ಬಟ್ಟೆ-
ಗೆ ೫ ಬೆಲೆ ಉಳ್ಳ ೮ ರೂಪಾಯಿ ಬಾಕಿಯಿದ್ದ ಪಟ್ಟಿಗೆ
ಹೋಗುವದಕ್ಕೆ ಹೋದ. ಅವನು ೧೨ ಕ್ಷ ರೂಪಾಯಿಗಳ ಬೆಲೆಗಳಿಗೆ
೧೫ ಕ್ಷ ರೂಪಾಯಿ ನಷ್ಟ ಪಡೆಯುತ್ತಾನೆ, ಅವನ ಬಾಕಿ ಉಳಿದ
ದಕ್ಕೆ ಎಷ್ಟು ಹಾಳು ಬೇಕಾಗುವದು? ಧಾನ್ಯ ಅಷ್ಟೊಂದು ಬ-
ಟ್ಟೆಯ ಪಟ್ಟಿ ಗಜ ಅಂತರ ಎಷ್ಟು ಇಷ್ಟು ರೂಪಾಯಿ?

೪ $\frac{ಕ್ಷ + ೮}{೫} + \frac{ಕ್ಷ - ೩}{೧೨} = ೮ + ೨$. ಕ್ಷ = ಎಷ್ಟು?

೫ $\frac{ಕ್ಷ + ...}{೮ - ೩} - ಕ್ಷ - ೫ = \frac{೮ + ಕ್ಷ}{೩}$. ಕ್ಷ = ಎಷ್ಟು?

೬ $\frac{}{ಕ}\sqrt{ಕ್ಷ} + (ಅ - ಬ)\sqrt{ಕ್ಷ} = ೨\sqrt{ಅಕ್ಷ + ಬಕ್ಷ}$. ಕ್ಷ = ಎಷ್ಟು?

೭— ಬೆಟ್ಟದ ಗಡಿ ಮಧ್ಯದ ೧ ನೇ, ೩ ನೇ ಸಂಖ್ಯೆ ...
ಸಂಖ್ಯೆ ಸಿದ್ಧ ಮಾಡಿರಿ.

ಭೂಗೋಲ.

೧ ಮುಂಬಯಿ ಇಲಾಖೆಯ ಉತ್ತರಭಾಗದ, ದಕ್ಷಿಣಭಾಗದ
ಮಹಾರಾಷ್ಟ್ರ ಕರ್ನಾಟಕವೆಂಬವು! ಇವುಗಳಲ್ಲಿಯ
ದಕ್ಷಿಣಭಾಗದ ಜಿಲ್ಲೆಗಳು ಯಾವು ಎಂದು ಹೇಳು ಪ್ರಸ್ತುತ!

೨ ಪೃಥ್ವಿಯ ಉತ್ತರ ಭಾಗದ ಖಂಡಗಳನ್ನು, ದಕ್ಷಿಣ ಭಾಗದ-
ಲ್ಲಿರುವ ಪೃಥ್ವಿಯ ದೇಶಗಳನ್ನು, ಅವುಗಳ ರಾ
ಜಧಾನಿಗಳನ್ನು ಬರೆ!

೩ ಯುರೋಪದ ದಕ್ಷಿಣದಲ್ಲಿರುವ ದೇಶಗಳನ್ನು, ಅವುಗ
ಳ ರಾಜಧಾನಿಗಳನ್ನು ಬರೆ!

೪ ಬಹುದೊಡ್ಡ ನದಿ ಭೂಮಿಯಲ್ಲಿ ಯಾವದು! ಅದು
ಎಲ್ಲಿ ಹುಟ್ಟುತ್ತದೆ.

೫ ಯಾವ ಸಂಯೋಗಭೂಮಿಯನ್ನು ಕಡಿದು ಪಾಸಿ
ಏಶಿಯಾದಿಂದ ಯುರೋಪ ಖಂಡಕ್ಕೆ ಹಡಗಗಳಿಗೆ ದಾರಿಯಾ
ಗುವದು.

೬ ಸಹಾರಾ ಮರುಭೂಮಿಯಂಥ ಮರುಭೂಪ್ರಾಂತಗಳು ಏಶಿಯ
ದಲ್ಲಿ ಯಾವವು.

೭ ಕಟಿಬಂಧಗಳು ಎಷ್ಟು! ಒಂದೊಂದು ಎಷ್ಟೆಷ್ಟು

ಅಂಶ ಆಗಲಿ! ಬಹುದೊಡ್ಡ ಕಟ್ಟಡವೇ ಆಗಲಿ!

ಉಳಿದ ಕನ್ನಡ ವ್ಯಾಕರಣ ಮೊದಲಾದ ವಿಷಯಗಳಲ್ಲಿ- ಒಬ್ಬೊಬ್ಬ ವಿದ್ಯಾರ್ಥಿಗೆ ಬೇರೆ ಬೇರೆ ಬಾಯಿ ಪ್ರಶ್ನೆಗಳನ್ನು ಕೇಳುವದರಿಂದ ಅವುಗಳನ್ನು ಛಾಪಿಸುವದಕ್ಕೆ ಅನುಕೂಲವಾಗಲಿಲ್ಲ.

ಪರೀಕ್ಷೆಯಲ್ಲಿ ಪಡೆದ ಗುಣಗಳ ಕ್ರಮವನ್ನು ಹೊಂದಿಸಿ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳ ಹೆಸರುಗಳ ಪಟ್ಟಿ.

ನಂ. ಬರ.	ಹೆಸರು.	ಜಾತಿ	ವಯಸ್ಸು.	ಸ್ವಗ್ರಾಮ.	ಗುಣ ಗಳು.
೧	ರಾವಜೀ ನಿಂಬಾಜೀ	ಮರಾ	೧೯	ಸಿದಲಗಾ	೧೯೪
೨	ನಾರಾಯಣ ಆಪ್ಪಾಜೀ	ಬ್ರಾ	೧೯	ಧಾರವಾಡ	೧೮೪
೩	ಮಾನಾಜೀ ತೇಜೋಜೀ	ವೈಶಾ	೧೯	ಶಿರಸಂಗಿ	೧೮೧
೪	ಚಿದಂಬರ ಕುದ್ರೋ	ಬ್ರಾ.	೧೯	ಹುಲಕೋಟಿ	೧೬೭
೫	ಗೋವಿಂದ ರಾಮಚಂದ್ರ	ಬ್ರಾ	೧೯	ಹಾಂಸಬ್ರಿ	೧೬೭

೬	ರಘುನಾಥರಾಘವೇಂದ್ರ	ಬ್ರಾ	೧೯	ಸವದತ್ತಿ	೧೬೩
೭	ರಾಮಚಂದ್ರಮಂಗೇಶ	ಶೆಣ್ವಿ	೧೯	ಬೆಳಗಾವಿ	೧೬೦
೮	ವಿನಾಯಕಭಾಸ್ಕರ	ಬ್ರಾ	೧೯	ವಿಜಾಪುರ	೧೫೪
೯	ಶಿವಪೂಜ	ಲಿಂ	೧೮	ಬೈಲಹೊಂಗಲ	೧೫೪
೧೦	ಗೋಪಾಳಗೋವಿಂದ	ಬ್ರಾ	೨೦	ಬಡಗಾವ	೧೪೪
೧೧	ರಾಮಚಂದ್ರವಿನಾಯಕ	ಬ್ರಾ	೨೦	ನರಗುಂದ	೧೪೩
೧೨	ಅಡಿವೆಯ್ಯದಾಸಯ್ಯ	ಲಿಂ	೧೮	ಸವದತ್ತಿ	೧೪೨
೧೩	ಶ್ರೀನಿವಾಸವೆಂಕಟೇಶ	ಬ್ರಾ	೧೯	ಚಿಕ್ಕೋಡಿ	೧೩೮
೧೪	ಶಂಕರಜೀವಾಜೀ	ಬ್ರಾ	೧೮	ಜಂಬಮುಳ	೧೩೬
೧೫	ವಿಠಲಗಣೇಶ	ಬ್ರಾ	೧೯	ಹುಕ್ಕೇರಿ	೧೨೩
೧೬	ವಿಷ್ಣುಕೃಷ್ಣ	ಬ್ರಾ	೧೯	ಹುನಗುಂದ	೧೨೩
೧೭	ಜಯವಂತಬಾಬುರಾವ	ಸೋನ	೨೦	ಬೆಳಗಾವಿ	೧೨೧
೧೮	ಪಾಂಡುರಂಗಬಾಳಕೃಷ್ಣ	ಬ್ರಾ	೧೮	ಉಗಾರ	೧೧೯
೧೯	ಸುಬಾನಾನರಸಿಂಗ	ಮರಾ	೧೮	ಹುಕ್ಕೇರಿ	೧೧೪
೨೦	[illegible]ಜೀಗೋವಿಂದ	ಬ್ರಾ	೧೮	ಜಮಖಂಡಿ	೧೧೩
೨೧	[illegible]	ಬ್ರಾ	೧೯	ಸವದತ್ತಿ	೧೧೧
೨೨	[illegible]	ಬ್ರಾ	೧೮	ಶಹಾಪುರ	೧೧೦
೨೩	ಗೋವಿಂದಬಾಳಾಜಿ	ಬ್ರಾ	೧೯	ಗುಡುಧಾಳ	೧೦೮

೨೪	ಅಣ್ಣಾಜೀ ರುದ್ರೋ	ಬ್ರಾ	೧೭	ಬೆಳಗಾವಿ	೧೦೪
೨೫	ವಿಠಲ ಸದಾಶಿವ.	ಬ್ರಾ	೧೮	[illegible]	[illegible]
೨೬	ಗುಳಪ್ಪಾ ದುವಪ್ಪಾ	ಲಿಂ	೧೯	ಚಿಕ್ಕೋಡಿ	೬೪
೨೭	ಶಿವರುದ್ರ ಮಲ್ಲಪ್ಪಾ.	ಲಿಂ	೧೭	ಯಮಕನ ಮರಡಿ	೬೪
೨೮	ಕೃಷ್ಣಾಜೀ ನರಸೋ	ಬ್ರಾ	೧೭	[illegible]	೬೩
೨೯	ವೆಂ. ರಾಜೀ ರಾಮಚಂದ್ರ	ಬ್ರಾ	೧೯	[illegible]	೭೬
೩೦	ವೆಂ. ಕೃಷ್ಣಾಜೀ ನಾರಾಯಣ	ಬ್ರಾ	೧೯	ಜಮಖಂಡಿ	೭೬
೩೧	ವೆಂ. ರಾಜೀ ಕಾಶೀನಾಥ.	ಬ್ರಾ	೧೭	ಯಮಕನ ಮರಡಿ	೭೧
೩೨	ಗೋಪಾಲ ರಘುನಾಥ	ಬ್ರಾ	೧೭	ಹುಕ್ಕೇರಿ	೭೧
೩೩	ಶಿವಯೋಗಿ ನಿಷ್ಠಪ್ಪ.	ಲಿಂ	೧೭	[illegible]	೬೩
೩೪	ಶಿವಲಿಂಗ ರಾಚಯ್ಯಾ	ಲಿಂ	೧೭	[illegible]	೬೨
೩೫	ಗುಂಡೋ ರಾಮಚಂದ್ರ	ಬ್ರಾ	೧೯	[illegible]	೬೬
೩೬	ರಾವಜಿ ಲಕ್ಷ್ಮಣ.	ಬ್ರಾ	೧೭	ಸದಲ	೬೬
೩೭	ಸಂಜೀವ ರಾಮಚಂದ್ರ	ಬ್ರಾ	೧೭	[illegible]	೬೩
೩೮	ಹನುಮಂತ ರಾಮಚಂದ್ರ	ಬ್ರಾ	೧೭	ಹುಕ್ಕೇರಿ	೫೬
೩೯	ಶೇಖ ಅಬದುಲ್	ಮು	೧೭	ಬೆಳಗಾವ	೪೭

Educational Intelligence.

ವಿದ್ಯಾಖಾತೆಯ ವರ್ತಮಾನಗಳು.

ಈ ತಿಂಗಳ ೧ನೇ ತಾರೀಖಿನಲ್ಲಿ ಬೆಳಗಾವಿ ಟ್ರೇನಿಂಗ ಕಾಲೇಜದಲ್ಲಿ ಹೊಸ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ ಪರೀಕ್ಷೆಯಾಯಿತು. ಇದರಲ್ಲಿ ಸುಮಾರು ೯೦ ಜನ ಉಮೇದವಾರರು ಬಂದಿದ್ದರು. ಅವರಲ್ಲಿ ಬುದ್ಧಿವಯಸ್ಸಿನ ಕಾರಣದಿಂದಲೂ, ಕನ್ನಡ ಅಕ್ಷರ ಬರಿಯೋಣ ಚನ್ನಾ ಬರದೆ ಇದ್ದ ಕಾರಣದಿಂದಲೂ ಸುಮಾರು ೪೩ ಜನ ತೆಗೆಯಲ್ಪಟ್ಟು ಉಳಿದ ೪೭ ಜನರ ಪರೀಕ್ಷೆ ಕಡೆತನಕ ಆಯಿತು. ಇವರಲ್ಲಿ ೪೫ ಜನರು ಪೂರ್ಣ ಗುಣಗಳ ಮೂರನೇ ಪಾಲಿಗಿಂತ ಹೆಚ್ಚು ಗುಣಗಳನ್ನು ಪಡೆದರು. ಈ ಪರೀಕ್ಷೆಯಲ್ಲಿ ಕೂಡಿದ ವಿದ್ಯಾರ್ಥಿಗಳು ಹಿಂದಿನ ೨ ಪರೀಕ್ಷೆಗಳಲ್ಲಿ ಕೂಡಿದವರಿಗಿಂತ ವಿಶೇಷ ಅಭ್ಯಾಸ ಮಾಡಿದವರಿದ್ದರೆಂದು ನೋಡಿ ನಾವು ಸಂತೋಷಪಡುತ್ತೇವೆ. ಆದರೂ ಶುದ್ಧ ಬರೆಯೋಣದರಲ್ಲಿ ಆಗತಕ್ಕಷ್ಟು ಸುಧಾರಣೆಯು ಇನ್ನೂ ಆದ ಹಾಗೆ ಕಾಣಲಿಲ್ಲ. ಆದದರಿಂದ ನಮ್ಮ ಮಾಸ್ತರ ಜನರೆಲ್ಲರು ಈ ವಿಷಯದಲ್ಲಿ ವಿಶೇಷವಾಗಿ ಲಕ್ಷ್ಯ ಕೊಡುವರೆಂದು ನಾವು ಕೋರುತ್ತೇವೆ. ಎಷ್ಟೋ ಜನ ಮಾಸ್ತರರು ಸ್ವತಃ ತಮ್ಮ ಮೇಲಧಿಕಾರಿಗಳಿಗೆ ಬರೆದ ಪತ್ರಗಳಲ್ಲಿ ಅನೇಕ ತಪ್ಪುಗಳು ಇರುತ್ತವೆಂದು-

ನಾವು ಮೇರೆ ಮೀರಿ ಹೇಳುತ್ತೇವೆ. ಅಂದರೆ ದೇಶದಲ್ಲಿ ತಿದ್ದುಪಾಟು ಪ್ರಾರಂಭಿಸುವ ದರವಾಜಾ ಆರಂಭವು ಭಾಷೆಯ ಸುಧಾರಣೆಯಿಂದಾಗುತ್ತದೆಂದು ನಮ್ಮ ಮಾನ್ಯರ ಜನರು ಕೂಡಾ ತಿಳಿದುಕೊಳ್ಳಬೇಕು.

ಈ ದಕ್ಷಿಣ ಭಾಗದಲ್ಲಿ ಬಿದ್ದಿರುವ ಪ್ರವಾಸೋಟಕರನ್ನು ನೇಮಿಸುವದರ ಸಲುವಾಗಿ ಸರಕಾರದವರು ಮಾಹಿಯಾನಾ ೨೦೦ ರುಪಾಯಿ ತಲಬಿನ ಸಾಂಕ್ಷನ್ ಕೊಟ್ಟರೆಂದು ಕೇಳುತ್ತೇವೆ.

ಮೆಡಿಕೋನ ಇನ್‌ಸ್ಪೆಕ್ಟರ ಧೋಂಡಗಲ್ಲರವರು ಬೆಳಗಾವಿಯಲ್ಲೇ ಇದ್ದಾರೆ. ಮುಂದಿನ ತಿಂಗಳಲ್ಲಿ ಕಲಾದಗಿಗೆ ಹೋಗುವ ಅಪೇಕ್ಷೆಯಿತ್ತು. ಆದರೆ ಈಗ ಅದು ನಿಂತಹಾಗೆ ಕಾಣುತ್ತದೆ.

ಬೆಳಗಾವಿಯ ಡಾ: ಕ್ಷ. ಶಂಕ್ಷಬೀಮುಕಾಮಿನಲ್ಲಿದ್ದಾರ ಕಾನಡಾ ಜಿಲ್ಲೆಯ ಪದವೀಧರನ್ನು ಯಾರಿಗೆ ಯಾವ ರುಸುಂಗಾರೆ.

ಹೋಗಿ ಸೇರಿದರು ೬ ತಿಂಗಳಾದವು.

ಬೆಳಗಾವಿ ಯ ಡಿ. ಇನ್ಸ್ಪೆಕ್ಟರ್‌ರಾದ ರಾ. ರಾ. ಚನಬಸಪ್ಪನವರಿಗೆ ಧಾರವಾಡ ಜಿಲ್ಲೆಗೆ ಬದಲು ಆಗುವದು. ಎಂದು ವರ್ತಮಾನವಿದೆ.

ರಾ. ರಾ. ಕನ್ನಡ ಟ್ರಾನ್ಸಲೇಟರರಾದ ಗಂಗಾಧರಯ್ಯನವರು ಮಹಾರಾಷ್ಟ್ರ ನವನೀತ ಗ್ರಂಥ ಒಂದು ಕನ್ನಡ ಕವಿತಾಸಂಗ್ರಹದ ಪುಸ್ತಕವನ್ನು ತಯಾರು ಮಾಡಿದ್ದಾರೆಂದು ಕೇಳುತ್ತೇವೆ. ಈ ಪುಸ್ತಕವು ಕನ್ನಡ ಭಾಷೆಯ ಸುಧಾರಣೆಗೆ ಬಹಳ ಉಪಯುಕ್ತವಾದದ್ದರಿಂದ ಇದು ಶೀಘ್ರವಾಗಿ ಛಾಪಿಸಲ್ಪಡುವದೆಂದು ಕೇಳುತ್ತೇವೆ.

ಬೆಳಗಾವಿಯಲ್ಲಿ ಒಂದು ಅಚ್ಚು ಮುದ್ರೆಯನ್ನು ಇಡುವದಕ್ಕೋಸ್ಕರ ಇಲ್ಲಿಯ ಛಾಪು ಖಾನೆಯವರು ಮಿ. ಡಿಕ್ಸನ ಧೊರೆಗಳವರು ಇಲ್ಲಿ ಬಂದಾಗ ಅವರ ಹತ್ತರ ರೂಪಾಯಿಗಳನ್ನು ಸಾಲವಾಗಿ ಕೊಡಬೇಕೆಂದು ಬೇಡಿಕೊಂಡದಕ್ಕೆ ಆ ಧೊರೆಗಳು ಒಪ್ಪಿಕೊಂಡಿದ್ದರು. ಆದರೆ ಈಗ ಈ ಛಾಪು ಖಾನೆಯವರ-

ಕನ್ನಡ ಅಚ್ಚುಗಳನ್ನು ಸಂಪಾದಿಸುವದಕ್ಕೋಸ್ಕರ ವಿಶೇಷ ಪ್ರಯತ್ನಮಾಡಿದಾಗ್ಯೂ ಅವು ಅವರಿಗೆ ಯಲ್ಲಿಯೂ ಸಿಕ್ಕದ್ದರಿಂದ ಕೆಲಸ ಬಹಳ ಹೀನವಾಗುತ್ತಿದೆ. ಈ ದಕ್ಷಿಣ ಮಹಾರಾಷ್ಟ್ರದಲ್ಲಿ ಒಂದು ಕನ್ನಡ ಅಚ್ಚು ಸ್ಥಾಪನೆ ಮಾಡದ ಹೊರತು ನಮ್ಮ ಶಾಲೆಗಳಿಗೆ ಬೇಕಾದಂಥ ಪುಸ್ತಕಗಳಾಗುವದು ಸಾಧ್ಯವಲ್ಲ. ಅಂಥಾ ಪುಸ್ತಕಗಳಾದ ಹೊರತು ಕನ್ನಡ ಪ್ರಾಂತದ ಸುಧಾರಣೆ ಯಾಗುವದೂ ಸಾಧ್ಯವಲ್ಲ

Correspondence.

ಪತ್ರಗಳ ಸಾರಾಂಶವು.

ಉಗರಗೊಳ್ಳ ತಾಲೂಕ ಪರಸಗಡ - ಶಾಲೆಯಲ್ಲಿ ಸುಮಾರು-೪೦।೪೫ ಹುಡುಗರು ಇದ್ದಾರೆ. ತಾ॥ ೨೨ನೇ ಫೆಬ್ರುವರಿ ದಿವಸ ಹಾನಗಲ್ಲಿನ ದೇಸಾಯಿ ಸ್ವಾದರ ರಾ॥ ರಾ॥ ಶ್ರೀನಿವಾಸರಾಯರವರು ಶಾಲೆಯ ಪಂಚರನ್ನು ತಗೊಂಡು ಶಾಲೆಗೆ ಬಂದು ಹುಡುಗರನ್ನು ಪರೀಕ್ಷಿಸಿ ಸಂತುಷ್ಟರಾಗಿ ಅವರಿಗೆ ಪ್ರೋತ್ಸಾಹ ಪಾಯಿಯ ಬಹುಮಾನವನ್ನು ಹಂಚಿದರು.

ಬಾದಾಮಿ - ಶಾಲೆಯಲ್ಲಿ ೬೦ ಜನ ಹುಡುಗರಿದ್ದಾರೆ. ಮು..

ದತವಿಲ್ಲದೆ ಬಿಟ್ಟಿದ್ದರೂ ಇಲ್ಲ; ಶಾಲೆಯ ಇನ್ನೇ ಮಾರ್ಚ-
ದಿವಸ ವೂ. ಕಲೆಕ್ಟರ ಮೊದಲಾದವರು ಶಾಲೆಗೆ ಬಂದು ಹುಡುಗ-
ರಿಗೆ ಒಂದೆರಡು ಪ್ರಶ್ನೆಗಳನ್ನು ಕೇಳಿ, ತಮ್ಮ ಸಂಗತಿ ವ್ಯಕ್ತ ಮಾವ
ಲೇದಾರರಿಗೆ ಶಾಲೆಗೆ ಬೇಕೆ ಬೆಳ್ಳೀ ಸ್ಥಳವೆಲ್ಲ ಕೊಡಬೇಕೆಂ
ದು ಕೇಳಿದ್ದಕ್ಕೆ ಅವರು ಪ್ರಾಮಾಣಿಕ ಬಂದು ಹಳೆ ಧರ್ಮಶಾ
ಲೆಯುಂಟು; ಅದನ್ನು ದುರಸ್ತಿ ಮಾಡಿಕೊಡುತ್ತೇವೆಯೆಂ
ದು ಹೇಳಿದರು. ಅದೇ ದಿವಸ ಸಾಯಂಕಾಲಕ್ಕೆ ಡೆಪ್ಯುಟರರು
ಶಾಲೆಯನ್ನು ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ರಜಿಸ್ಟರಬುಕ್ಕಿ
ನಲ್ಲಿ ಬರೆದರು. ಮಾಮಲೇದಾರರೂ, ಫೌಜದಾರರೂ
ಶಾಲೆಗೆ ಬಹಳ ಸಹಾಯ ಮಾಡುತ್ತಾರೆ. ಶಾಲೆಗಿನ್ನೂ ಬೇಕಾದ
ಸಾಮಾನು ಕೊಟ್ಟಿಲ್ಲ. (ಪತ್ರ ಬರೆದವರು ಶುದ್ಧ ಬರೆಯುವ
ಅಭ್ಯಾಸ ಚನ್ನಾಗಿ ಮಾಡಬೇಕೆಂದು ನಾವು ಶಿಫಾರಸ ಮಾಡು
ತ್ತೇವೆ. ಸಂ.ಕ.)

ದೇವನಿರಿ ತಾಲೂಕ ಕರ್ಜಗಿ-ಶಾಲೆಯ ಸಂಬಂಧ ವರದಾ.
ರಾ. [illegible] ಟಿ. ಕೇಳಭಾಗಮರಾಯರ ಶಾ।। ನೇ ಕೈಬ್ರಾಲಕಿ ಪ್ರವ-
[illegible] ನನ್ನು ಪರೀಕ್ಷಿಸಿ-ರೂಪಾಯಿಗಳ [illegible]
[illegible] ಇವರು ಶಾಲೆಗೆ ಬಹಳ ಸಹಾಯ ಮಾಡುತ್ತಾರೆ.

Historical Events.

ಐತಿಹಾಸಿಕ ಸಂಗತಿಗಳು.

೧ ಆದಾಮನೂ, ಹವ್ವಳೂ — ಕ್ರಿಸ್ತೀಯನ್ ಜನರು ಇವರಿಬ್ಬರೂ ಕ್ರಿಸ್ತಶಕಕ್ಕೆ ಮುಂಚೆ ೪೦೦೪ ನೇ ವರ್ಷದಲ್ಲಿ ಹುಟ್ಟಿದರೆಂದು ಹೇಳುತ್ತಾರೆ. ಆದರೆ ಸೃಷ್ಟಿಯ ಕಾಲದ ವಿಷಯವಾಗಿ ಕ್ರಿಸ್ತಜನರಲ್ಲಿ ೧೪೦ ಬೇರೆ ಬೇರೆ ಮತಗಳುಂಟು. ಇವುಗಳಲ್ಲಿ ಅತಿಸ್ವಲ್ಪ ಕಾಲ ಹೇಳುವವು ಕ್ರಿ.ಶ.ಕ್ಕೆ ಮುಂಚೆ ೩೬೧೬ ವರ್ಷಗಳಂತಲೂ, ಬಹು ದೀರ್ಘಕಾಲ ಹೇಳುವವು ಕ್ರಿ.ಶ.ಕ್ಕೆ ಮುಂಚೆ ೬೯೮೪ ವರ್ಷಗಳಂತಲೂ ಸ್ಥಾಪಿಸುತ್ತವೆ.

ಈಸಾಪ್ ನೀತಿಕಥೆಗಳು — ಕ್ರಿ.ಶ.ಕ್ಕೆ ಮುಂಚೆ ೫೬೫ನೇ ವರ್ಷದಲ್ಲಿ ಬರೆಯಲ್ಪಟ್ಟವಂತೆ. ಆದರೆ ಈಸಾಪನು ಕಲ್ಪಿತ ಮನುಷ್ಯನೆಂದು ಬಹು ಮತವುಂಟು.

---

೩ ಯುಗಗಳು — ಕ್ರಿಸ್ತೀಯನ್ ಗ್ರಂಥಕರ್ತರು ಸೃಷ್ಟಿಯ ಕಾಲದಿಂದ ಕ್ರಿಸ್ತನ ಜನ್ಮಕಾಲದವರೆಗೆ ಹೋದ ಹಾದಿಯಲ್ಲಿ ೬ ಯುಗಗಳನ್ನು ಕಲ್ಪಿಸುತ್ತಾರೆ — ೧ನೇದು, ಸೃಷ್ಟಿಯಿಂದ ಜಲಪ್ರಳಯದವರೆಗೆ ವರ್ಷಗಳು — ೧೬೫೬ ೨ನೇದು, ಜಲಪ್ರ-

ಳಯದಿಂದ ಅಬ್ರಹಾಮನ ವೇಳೆ ವರೆಗೆ, ೪೨೭ ವರ್ಷಗಳು — ೩ನೇದು, — ಅಬ್ರಹಾಮನಿಂದ ಮೋಶೆಯು ಇಜಿಪ್ತ ದೇಶವನ್ನು ಬಿಟ್ಟ ಕಾಲ ವರೆಗೆ, ೪೩೦ ವರ್ಷಗಳು — ೪ನೇದು, ಆ ಪ್ರಯಾಣದಿಂದ ಸಾಲೋಮೋನನು ಗುಡಿಯನ್ನು ಕಟ್ಟಿದ ವೇಳೆ ವರೆಗೆ, ೪೭೯ ವರ್ಷಗಳು — ೫ನೇದು, ಆ ಗುಡಿಯ ಕಾಲದಿಂದ ಜೆರೂಸಲೇಮು ಹಾಳಾದ ಕಾಲಮಟ್ಟಿಗೆ ೪೨೪ ವರ್ಷಗಳು — ೬ನೇದು, ಜೆರೂಸಲೇಮು ಹಾಳಾದ ಕಾಲದಿಂದ ಕ್ರಿಸ್ತನ ಜನ್ಮಕಾಲ ವರೆಗೆ ೫೮೪ ವರ್ಷಗಳು.

---

೪ ಹೊಲಗಳು — ಭೂಮಿಯನ್ನು ಹಸನ ಮಾಡಿ ಬೀಜ ಬಿತ್ತುವ ಯುಕ್ತಿ ಜಲಪ್ರಳಯವಾದ ನಂತರ ತೀವ್ರವಾಗಿ ಹೊರಟಿತು. ಈ ಯುಕ್ತಿಯು ಮೊದಲು ಇಜಿಪ್ತ ದೇಶದಲ್ಲಿ ಹುಟ್ಟಿತು.

---

೫ ಅಜೀನಿಯನ್ಸ್ — ಈ ಮತದವರು ಕ್ರಿ.ಶ. ೬೬೪ನೇ ವರ್ಷದಲ್ಲಿ ಉಂಟಾದರು. ದೇವರು ಮಾಂಸಾಹಾರವನ್ನು ನಿಷೇಧಿಸಿದ್ದಾನೆಂದು ಅವರು ಪ್ರತಿಪಾದಿಸಿದರು. ಬಾಯಬಲದ ಜೆನೆಸಿಸ್ ಎಂಬ ಭಾಗದ ಮೊದಲನೇ ಅಧ್ಯಾಯವನ್ನು ಇದಕ್ಕೆ ಆಧಾರವಾಗಿ ತೋರಿಸಿದರು. ಈ ಹಳೆ ಮತದವರ—

ವಿನ ಯಂತ್ರಗಳು ಈಗ ಹೊಂಚೆಪ್ರಕಟಗಳಲ್ಲಿಯೂ, ಚಿಕ್ಕ ಇಂಗ್ಲಿಷ ಗ್ರಾಮಗಳಲ್ಲಿಯೂ ಹಬ್ಬುತ್ತ ನಡೆದಿದ್ದಾವೆ.

---

೧ ಹವೆ- ಟಾರಿಸೆಲಿಯು ೧೬೪೩ನೇ ವರ್ಷದಲ್ಲಿ ಹವೆಯ ಭಾರವನ್ನು ಗೊತ್ತುಹಚ್ಚಿದನು. ಪಾಸ್ಕಲ್‌ಯು ೧೬೪೮ನೇ ವರ್ಷದಲ್ಲಿ ಈ ಭಾರವು ಹವೆಯ ಉನ್ನತಿಯ ಪ್ರಮಾಣದಂತೆ ಬದಲಾಗುತ್ತದೆಯೆಂದು ಸ್ಥಾಪಿಸಿದನು. ಇತ್ತಲಾಗಿ ಹಾಲೀ, ನ್ಯೂಟನ್ ಮೊದಲಾದವರು ಅನೇಕ ಅನುಭವಗಳಿಂದ ಹವೆಯ ವ್ಯಾಪಾರಗಳನ್ನು, ಅದರ ಪರಿಣಾಮಗಳನ್ನು ಪ್ರಕಟಪಡಿಸಿದರು. ಮಾಗ್ಡಿಬರ್ಗ ಯೆಂಬಲ್ಲಿ ಗೆರಿಕ ಯು ೧೬೫೦ನೇ ವರ್ಷದಲ್ಲಿ ವಾಯಾಕರ್ಷಣ ಯಂತ್ರವನ್ನು ರಚಿಸಿದನು.

ಶಾಲಾಪತ್ರಿಕೆ.

ಪುಸ್ತಕ ೧ ಸಂಚಿಕೆ ೨.

ಬೆಳಗಾವಿ, ಮಾಹೆ ಮೇ ೧೮೬೭

Education.

ಶಿಕ್ಷಣವು.

ನಮ್ಮ ಶಿಕ್ಷಣದಲ್ಲೆಲ್ಲ ಒಳ್ಳೇ ಚಟಗಳನ್ನು ಜಾಗ್ರತಿಪಡಿಸುವದಕ್ಕೆ ನಾವು ಲಕ್ಷ್ಯ ಕೊಡಬೇಕು.

ಚಟಗಳು ಮನುಷ್ಯನಲ್ಲಿ ಯಾವನೇ ಸ್ವಾಭಾವಿಕವಾಗಿರುತ್ತವೆ. ಅವುಗಳಿಂದ ಶ್ರಮೆಯು ಹಗುರಾಗುತ್ತದೆ, ಮತ್ತು ನಾವು ಮಾಡಬೇಕಾದ ಕೆಲಸವು ಸಂತೋಷಕರವಾಗುತ್ತದೆ. ಕೆಟ್ಟ ನಡತೆಯ ಸಂಸರ್ಗದಿಂದಲೂ, ಅನುಚಿತವಾದ ಮೋಹಗಳಿಂದಲೂ ಅವು ನಮ್ಮನ್ನು ಸಂರಕ್ಷಿಸುತ್ತವೆ. ನಮ್ಮ ನಡತೆಗೆ ಸಂಬಂಧವಾದ ಚಟಗಳಿಗಿಂತ ಮಾನಸಿಕ ಚಟಗಳು ಕಡಿಮೆ ಅವಶ್ಯಕವಾದವುಗಳಲ್ಲ. ಇದಕ್ಕೆ ಉದಾಹರಣೆ ಬೇಕಾದರೆ, ಯಾವದೊಂದು ನಿಯಮದ ಅಭ್ಯಾಸದಿಂದ ಉದಾಹರಣೆಗಳನ್ನು ಬಿಡಿಸುವ ಕ್ಕಿಂತ ಆ ನಿಯಮದ ಮೂಲತತ್ವಗಳ ಅಭ್ಯಾಸವು ಉಂಟಾ...

ಬಿಸುವ ಚಟವು ಬಾಲಕರ ಜ್ಞಾನಶಕ್ತಿಗಳನ್ನು ಜಾಗ್ರತೆಪಡಿಸುವಲ್ಲಿ ಬಹುಪ್ರಯೋಜನಕರವಾಗಿರುತ್ತದೆ.

ವಿಚಾರದ ಚಟಗಳೂ, ನಡತೆಯ ಚಟಗಳೂ, ಅಭ್ಯಾಸದಿಂದಲೂ, ಪುನಃ ಪುನಃ ಆವರ್ತನಗಳಿಂದಲೂ, ಕಾಲಪಾಕದಿಂದಲೂ ಮಾತ್ರ ಸ್ಥಿರವಾಗುತ್ತವೆ. ಒಂದು ಸಣ್ಣ ಕೆಲಸವನ್ನು ಚೆನ್ನಾಗಿ ಮಾಡಲಿಕ್ಕೆ ಬಂದರೆ, ಅದಕ್ಕಿಂತ ದೊಡ್ಡದನ್ನು ಮಾಡುವ ಅಪೇಕ್ಷೆಯುಂಟಾಗುತ್ತದೆ. ಸುಖೋತ್ಪಾದಕವಾಗಿ ಕಾಣಿಸುವಂಥಾದು ಪುನಃ ಪುನಃ ಯತ್ನಮಾಡುವದರಿಂದ ಸಾಧ್ಯಗೆ ಅತಿಸುಲಭವಾಗಿರುವದು. ಒಳ್ಳೇ ಚಟಗಳು ಕ್ರಮಕ್ರಮವಾಗಿ ಉಂಟಾಗುತ್ತವೆ. ಲಕ್ಷ್ಯ, ವಿಚಾರ, ಸಂಗತಿಕರಣ, ಉದ್ಯೋಗ, ಸದ್ಗುಣ, ಧಾರ್ಮಿಕತ್ವ ಇವುಗಳ ಚಟಗಳು ಉದಾಹರಣೆಯ ಬಲದಿಂದ ಪ್ರಾಪ್ತವಾಗುತ್ತವೆಯೋ, ಹಾಗೆ ಶಿಕ್ಷಣದ ಬಲದಿಂದ ಉಂಟಾಗುವದಿಲ್ಲ. ಯಾಕಂದರೆ ಯಾರ ವರ್ತನೆಯವರು ಮಾದರಿಯಾಗಿ ಮಾಡುವ ಗುಣವು ಬಾಲಕರಲ್ಲಿ ಬಹು ಜಾಗೃತವಾಗಿರುತ್ತದೆ. ತಾಯಿತಂದೆಗಳು ಯಾವಾಗಲೂ ಕೆಲಸದಲ್ಲಿ ತೊಡಗಿಕೊಂಡಿದ್ದರೆ, ಅವರ ಮಕ್ಕಳು ಆಲಸ್ಯಗಾರರಾಗಲಾರರು, ಅವರಲ್ಲಿ ತೀವ್ರವೇ ಉದ್ಯೋಗದ ಚಟವುಂಟಾಗುವದು. ಸ್ವಚ್ಛತೆಯ ಹೊರ್ತಾನಿಯಮವನ್ನು ಪ್ರೇರೇಪಿಸಲಾಗದೋ,

ಹಾಗೆ ಶಾಸನವನ್ನು ತಿಳಿಸಿದ ಹೊರತು ಯಾವುದೊಂದು ಮಕ್ಕಳನ್ನು
ಹುಡುಗರಂತ ಮಾಡಿಬಾರದು.

ಲಾಕ್ ಎಂಬಾತನು ಹೇಳುವ ದಂ.ನಂ.ದರ. ದೇಶದವರ ಪ್ರಾಪ್ತ
ಗಳಿಂದ ಗುಣಗಳೂ, ದೋಷಗಳೂ ಬಾಲಕರ ತಿಳುವಳಿಕೆಗೆ ಪ್ರತ್ಯ
ಕ್ಷವಾಗಿ ಬರುವಂತೆ ಅವರಿಗೆ ತಿಳಿಸಿಕೊಡಬಹುದು. ಯಾವ ಕೆಟ್ಟ
ನಡತೆಯನ್ನು ಬಾಲಕರು ದುರ್ಲಕ್ಷ್ಯದಿಂದ ತಾವು ಸ್ವತಃ ಕೈಕೊಳ್ಳುವ
ರೋ, ಅದನ್ನು ಬೇರೆಯವರಲ್ಲಿ ನೋಡಿ ನಾಚಿಕೆ ಪಡಬಾರದು.
ಸಾಧಾರಣ ವಾಕ್‌ಶಿಕ್ಷಣಪದ್ಧತಿಯಲ್ಲಂತೂ ಇರುವದೋ ನಾವು
ನಾನು ಇಚ್ಛಿಸಿದುದೇ ತಿಳಿಸಲಿಕ್ಕೆ ಹೊರದು ಹೂವದಂತೆ,
ಬಾಲಕರ ಸ್ಮರಣದಲ್ಲಿ ಯಾವಾಗಲೂ, ನಿಯಮಗಳನ್ನು, ಉಪ
ದೇಶಗಳನ್ನು ತುಂಬಿಬಿಡುವದೇ. ಅವು ಅವರಿಗೆ ಬಹುಶಃ ತಿ-
ಳಿದಿರುವದಿಲ್ಲ; ಮತ್ತು ಹೇಳಿದಕ್ಷಣವೇ ಮರೆತುಹೋಗುತ್ತವೆ.
ಕೆಲವು ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಅವಶ್ಯಕವಾದ ನಿಯಮ
ಗಳನ್ನು ಪಾಠಮಾಡಲಿಕ್ಕೆ ಹೇಳುತ್ತಾರೆ. ಅವುಗಳ ಹತ್ತನೇ ಪಾಲು
ಸಹ ಪಾಠಮಾಡುವದಕ್ಕೆ ಹುಡುಗರಲ್ಲಿ ಸಾಮರ್ಥ್ಯವಿರುವದಿ-
ಲ್ಲ; ಅವುಗಳನ್ನು ಆಲೋಚಿಸಿ ಅರ್ಥ ತಿಳಿದುಕೊಳ್ಳುವದಂತು
ದೂರೇ ಸರಿ. ಹೀಗಿರುತ್ತಾ ಆ ಬಾಲಕರು ಆ ನಿಯಮಗಳನ್ನು
ಪಾಠಮಾಡದೆ ಇರುವದು ಸ್ವಾಭಾವಿಕವೇ ಸರಿ. ಹೀಗೆ ಕೆಲ-

[illegible]

ಅವರು ಉಪಾಯವಿಲ್ಲದೆ ಆಶಕ್ತಿಯನ್ನು ಅನುಭೋಗಿಸಬೇಕ

ತ್ತೆಯೂ ಬಾಗುತ್ತಾರೆ. ಸುಮ್ಮನೆ ಶಿಕ್ಷೆಯ ಭಯವಿಲ್ಲದ ಹೊ

ದ ಮೇಲೆ ಅಂಥಾ ತಪ್ಪುಗಳನ್ನು ಆದರೂ ಮಾಡುವದಕ್ಕೆ ಹೇಸ

ದೆ ಅವರು ಮೊದಲಿನಂತೆ ನಡೆಯಲಾರಂಭಿಸುತ್ತಾರೆ.

ಆದರೆ ನಿಯಮಗಳನ್ನು ಪಾಠಮಾಡಿಸಿ ಹುಡುಗರಿಗೆ ಬಿಡ

ಕಲಿಸುವದು ತಕ್ಕ ಮಾರ್ಗವಲ್ಲ. ಆ ನಿಯಮಗಳು ಹುಡುಗರ

ಸಹಜ ಸ್ವಾಭಾವಿಕವು. ನಿಮ್ಮ ವಿದ್ಯಾರ್ಥಿಗಳು ಇಂಥಾ ದೋಷ

ಕೆಲಸವನ್ನು ಮಾಡುವದು ಅವಶ್ಯವೆಂದು ನಿಮಗೆ ತೋರಿದ

ಅಭ್ಯಾಸದಿಂದ ಆ ಕೆಲಸ ಮಾಡುವ ಅಭಿರುಚಿಯನ್ನು ಅವ

ಲ್ಲಿ ಹುಟ್ಟಿಸಬೇಕು. ಹೀಗೆ ಮಾಡುವದರಿಂದ ಅವರಲ್ಲಿ ಚಟವು

ಬೀಳುವದು. ಇಂಥಾ ಚಟಗಳು ಬಹು ನೆಲೆಗೊಂಡ ನಂತರ

ಸ್ಮರಣದ ಸಹಾಯದ ಹೊರತು ಮಾತ್ರ ತಕ್ಕ ಕೆಲಸಗಳು ಸುಲ

ಭವಾಗಿಯೂ, ಸ್ವಾಭಾವಿಕವಾಗಿಯೂ ತಮ್ಮಿಂದ ತಾವೇ ಆಗಿ

ಹೋಗುತ್ತವೆ. ಆದಕ್ಕೆ ಒಳ್ಳೇ ಸರಳ ಸಂಗತಿಗಳನ್ನು ಹುಡು

ಹೇಳುವದು ಅವಶ್ಯಕವಾದದ್ದು. ಅವು ಯಾವವೆಂದರೆ.

೧. ಯಾವ ಕೆಲಸ ಮಾಡುವ ಚಟ ಅವರಲ್ಲಿ ಉಂಟಾಗ

ಬೇಕೆಂದು ನೀವು ಅಪೇಕ್ಷಿಸುತ್ತೀರೋ, ಆ ಕೆಲಸವನ್ನು ವ

ಸುವ ಅಭ್ಯಾಸ ಪ್ರೀತಿಯುಕ್ತ ಶಿಕ್ಷಣಗಳಿಂದಲೂ, ಸಾತ್ವಿಕವಾದ ಉಪದೇಶಗಳಿಂದಲೂ, ಅವರ ಕೈಯಿಂದ ನಡೆಸಿರಿ. ಅವರು ಯಾವಾಗಾದರೂ ಮರೆತರೆ, ಅದನ್ನು ಕುರಿತು ಅವರು ಬುದ್ಧಿಪೂರ್ವಕವಾಗಿ ದುರ್ಲಕ್ಷ್ಯಮಾಡಿದರೆಂದು ನೆನಸಿ ಕಠೋರವಾದ ಶಿಕ್ಷೆಗಳಿಂದ ಅವರನ್ನು ಬೋಧಪಡಿಸಬೇಡಿರಿ.

೨ ಅನೇಕ ಚಟಗಳನ್ನು ಒಮ್ಮೆಲೆ ಸ್ಥಾಪಿಸುವ ಯತ್ನ ಮಾಡಬೇಡಿರಿ. ಅದರಿಂದ ನಿಮ್ಮ ವಿದ್ಯಾರ್ಥಿಗಳು ತೊಂದರೆಪಟ್ಟು ಒಂದಾದರೂ ಪೂರ್ಣವಾಗಿ ಸ್ಥಾಪಿಸಲ್ಪಡದೆ ಹೋಗುವದು. ಎಡೆಬಿಡದೆ ಅಭ್ಯಾಸದಿಂದ ಒಂದು ಕೆಲವಾದರೂ ಅವರಲ್ಲಿ ಪೂರ್ಣವಾಗಿ ಉಂಟಾದ ಬಳಿಕ ಇನ್ನೊಂದರ ಅಭ್ಯಾಸ ಮಾಡಿಸುವದಕ್ಕೆ ಆರಂಭ ಮಾಡಬಹುದು.

ಲಕ್ಷ್ಯಕೊಡುವ ಚಟವೂ, ಏಕಾಗ್ರತೆಯ ಚಟವೂ, ಅಭ್ಯಾಸದ ಮುಖ್ಯಾಂಗಗಳಾಗಿರುತ್ತವೆ.

೩ [illegible] ಹಾಗೆ, ನಾವು ಹೇಳುವ ಪಾಠಗಳಲ್ಲಿ ವಿದ್ಯಾರ್ಥಿಗಳು ಪ್ರೀತಿಪಡುವ ಹಾಗೆ ನಮ್ಮ ಬೋಧನಕ್ರಮವಿದ್ದರೆ, ಅದರಿಂದ ಲಕ್ಷ್ಯಕೊಡುವ ಸ್ವಭಾವವು ಅವರಲ್ಲಿ ಸಹಜವಾಗಿಯೇ ಉಂಟಾಗುವದು. ಏಕಾಗ್ರ ಮನಸ್ಸಿನಿಂದ ಹೇಳಿದ ವಿಷಯವನ್ನು ಕುರಿತು ಆಲೋಚಿಸುವ ಸ್ವಭಾವವನ್ನುಂಟು ಮಾಡುವ-

ಡು. ಅತಿಸ್ಥೂಲವಪುಷ್ಕ, ಅತಿಕಷ್ಟತರವಾದ ಕೆಲಸವಾಗಿರುತ್ತ
ದೆ. ಚಿಕ್ಕವಯಸ್ಸಿನಲ್ಲಿ ಇಂಥಾ ಚಿತ್ರಮಾರ್ಗವಾಗಿ ಉಂಟಾಗಲಾ
ರದು; ಆದಕಾರಣ ಮನೋನುಸಾರವಾಗಿ ಇದನ್ನು ವೃದ್ಧಿಪಡಿಸ
ತ್ತ ನಡೆದರೆ, ತೀವ್ರವೇ ಇದು ವಿದ್ಯಾರ್ಥಿಗಳಲ್ಲಿ ನೆಲೆಗೊಳ್ಳು
ವದು. ಈ ಶಕ್ತಿಯಿಂದಲೂ, ಯೋಗ್ಯವಾಗಿ ವ್ಯವಸ್ಥೆಪಡಿಸಿ
ದ ಜ್ಞಾನಾಂಶಗಳಿಂದಲೂ, ಕಾರ್ಯಸಿದ್ಧಿಯುಂಟಾಗುವದಕ್ಕೆ ಬ
ಹುಬಲವುಳ್ಳ ಸಾಧನವಾಗುತ್ತದೆ

ಅವಲೋಕನಶಕ್ತಿಯನ್ನು ವಿಶೇಷವಾಗಿ ಜಾಗ್ರತೆ ಪಡಿ
ಸಬೇಕು.

ಸ್ಪಷ್ಟಪದಾರ್ಥಗಳನ್ನು ಕುರಿತು ಕಲಿಸಲ್ಪಟ್ಟ ಪಾಠಗಳಿಂ
ದ ಅವಲೋಕನ ದಟವು ಮುಖ್ಯವಾಗಿ ಉಂಟಾಗುತ್ತದೆ.
ಮಾರ್ಗದಲ್ಲಿರುವ ಗಿಡಗಳನ್ನೂ, ಪಾಷಾಣಾದಿಗಳನ್ನೂ, ಪು
ಷ್ಪಗಳನ್ನೂ, ಪಶುಗಳನ್ನೂ, ಮನೆಯೊಳಗಿನ ನಾನಾತರದ
ಪದಾರ್ಥಗಳನ್ನೂ, ಪರೀಕ್ಷಿಸಿನೋಡುವ ಅಭ್ಯಾಸವನ್ನು ಹು
ಡುಗರಲ್ಲಿ ಉಂಟುಮಾಡುವದರಿಂದ ಅವಲೋಕನಶಕ್ತಿಯು
ಜಾಗ್ರತವಾಗುತ್ತ ಹೋಗುತ್ತದೆ. ನಿರಂತರವಾಗಿ ಕಣ್ಣುಗಳ ಮುಂದೆ
ಬರುವ ಪದಾರ್ಥಗಳ ರಚನೆ, ಗುಣ, ಉಪಯೋಗ ಮೊದಲಾ
ದವುಗಳನ್ನು ಕುರಿತು ಆಲೋಚಿಸುವ ಸ್ವಭಾವವನ್ನು ಪಡೆ

ಪೆರೆ, ಅದರಿಂದಮುಂದೆ ಅನೇಕಶಾಸ್ತ್ರಂಗಳ ವಿಷಯ [illegible]
ನ್ನೂ ಕುರಿತು ಶೋಧನ ನಡಸುವ ಪ್ರಸ್ತಾವನೆಯು [illegible]
ದೆ.....

Shabdamanidurpana.

ಶಬ್ದಮಣಿದರ್ಪಣಂ।।

ಪುರುಷರೆ ಪುಲ್ಲಿಂಗಂ ಸ್ತ್ರೀ
ಯರೆ ಸ್ತ್ರೀಲಿಂಗಮುಳಿದುವೆಲ್ಲಂ ನಪುಂ
ಸಕಮಲ್ಲಿ ಕನ್ನಡದೊಳ್.
ಸುರಚಿತ ಚರ್ಚನೆಯು ಮುಂತಾದಲಿಂಗಮೊಳವಾನಿರ್ದ್ದೆ।।

ಅರ್ಥ— ಪುರುಷಂ ಪೇಳ್ವ ಶಬ್ದಂಗಳ್ ಪುಲ್ಲಿಂಗಂಗಳ್ ಸ್ತ್ರೀ ಯರಂ ಪೇಳ್ವ ಶಬ್ದಂಗಳ್ ಸ್ತ್ರೀಲಿಂಗಂಗಳ್, ಉಳಿದ ಶಬ್ದಂಗಳ್ [illegible] ಲ್ಲವು ನಪುಂಸಕಲಿಂಗಂಗಳ್, ಉಂ — ಪುಂ, ಶಿವ, ಕೃಷ್ಣ, ಬ್ರಹ್ಮ ಇಂ. ಸ್ತ್ರೀ, ಗೌರಿ, ಪಾರ್ವತಿ, ಲಕ್ಷ್ಮಿ ಇಂ. ನಪುಂ, ಮರ, ಬೆಟ್ಟ ಮಲೆ, ಕರಡಿ, ಇಂ. ತಿರ್ಯಗ್ಜೀವಂಗಳ್ಗೆ ಪೇಳ್ದ ನಾಲ್ಕೆರ್ದ್ ನವುಸಂಗಳ್ಗೆಲ್ಲವು ನಪುಂಸಕಲಿಂಗಂಗಳ್ [illegible] ಕನ್ನಡದೊಳ್ ಪಂಡಿತಪ್ರಸಿದ್ಧಮಾಗಿರ್ಪ್ಪುವು [illegible]

ಲ್ಲಿಂ ಕ್ರಮದಿಂ ತೃತೀಯಾರ್ಥಕ್ಕೆ ಬರುವವು.

ಜನಕ್ಕಟ್ಟಿದ ಮನೆ ಸಂತಾನಕೆ.

ಮೆನಿತುಂ ದುಸ್ತ್ಯಾಗಮಪ್ಪುದೆಂತೆನೆ ॥

ತ್ರಿವಿಧಮೊಳ್ಳಿಂಗಂ ಮತ್ತಾ

ಜನಂ ಮಗಟ್ಟುದ್ದಿಬಿಳೆನೆ ಮನೆಯೆರಡುಮಲ್ಲ ॥ ೧ ॥

ಅರ್ಥ - ಜನಕ್ಕಟ್ಟಿಂತ ಜನದಿಂದ ಬಿಡಿಸಲ್ಕಂ . ಇಂತೆ ಜನ್ಮ, ಸ-

ತ್ವ, ಸಂಬಂಧಗಳು ಮನೆ ಸಂತಾನಗಳ್ ಹೇಳುವ ತ್ರಿವಿಧ ಲಿಂಗ

ಬರುವವು. ಉ - ದುರ್ಜನ, ಸಜ್ಜನ, ಸುಜನ, ಇಂತಿವು -

ಹಲವು ಮಾನ್ಯಂತ್ರಕ್ಕೆ ಮಹಾಜನ ಮುಂದೆ ಸೇರುವಂತೆ

ಗಳು ಸತ್ತ್ರಜ.

ಸ್ವಾದಿಸಿ ಮಮುಂ ಬಿರಿಯುತದೊಳ್.

ಒಂದಿಪ್ಪಾಪ್ರಾಪ್ತ ವಿಭಕ್ತಿಗಳಪ್ಪುವು ॥

ಸಂದಪ್ಪದರ್ಥವಶದಿ

ಸಂದಿಹ ಸಿದ್ಧ ವಿಧದ ಲಿಂಗಂಗಳ್ಳಿಂ ॥ — ೨ ॥

ಅರ್ಥ - ಸಂದಿರ್ಪ ನಾನಾತೆರದ ಲಿಂಗಂಗಳೊಳಂ

ನಾಮ ವಿಭಕ್ತಿಗಳ್ ಮ್, ಅಮ್, ಇಂದೆ, ಒತ್ತ್, ಅತ್, ಅಂದು, ಡರ್,

ಎಂದು ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ, ಪಂ

ಚಮೀ, ಷಷ್ಠೀ, ಸಪ್ತಮಿಗಳೆನಿಸಿ ನಾಲ್ಕನೆದಿಂ ಬರುವವು.

ಂಕಾರಕವೆಂಬುದು ಕ್ರಿಯಾನಿಮಿತ್ತಂ, ಅದು ಕರ್ತೃ, ಕರ್ಮ,

ಕರಣ, ಸಂಪ್ರದಾನ, ಅಪಾದಾನ, ಅಧಿಕರಣ, ವೆಂದು ಷ-

ಡ್ವಿಧಮಾಗಿಪ್ಪುದು. ಷಷ್ಠಿಯುಂ ಮಂ ಸಂಬಂಧಾರ್ಥಕಂ. ಅ-

ಅಂ.- ಮರಂ, ಮರನಂ, ಮರದಿಂ, ಮರಕ್ಕೆ, ಮರದತ್ತಣಿಂ,

ಮರದ, ಮರದೊಳ್

ಏಕದ್ವಿತ್ವಬಹುತ್ವಮ

ನೇಕದ್ವಿಬಹುತ್ವವಸ್ವರಗಳೊಳ್ ಆಚರಿಪರ್॥

ಪ್ರೇಕ್ಷಾಕರಂ ಕನ್ನಡದೊಳ್.

ಶೇಕಬಹುತ್ವಂ ದ್ವಿವಚನಮುಚಿತದೆಂಬರ್॥ ೯॥

ಅರ್ಥ - ಒಂದೆರಡು ಮೂರೆಂದು ಪದಾರ್ಥಮನೆಣಿಸುವ ಪ್ರೇ-

ಕ್ಷೆಯೊಳ್ ಏಕವಚನ, ದ್ವಿವಚನ ಬಹುವಚನಂಗಳಂ ಪ್ರೇಕ್ಷಕರೆನಿಸು-

ವರ್. ಏಕವಚನ ಬಹುವಚನಂಗಳ್ ಕನ್ನಡದೊಳ್ ಪ್ರಸಿದ್ಧಂ-

ಗಳ್. ದ್ವಿವಚನಮಂ ಜಾಣ ಚಿತ್ರದಿನರಿವುದು. ಉದಾ - ಪ್ರೇ

ರುಬಿದು, ಕಣ್ಗಳಿವು, ಕುರುಳ್ಗಳಿವು, ಕಬಿಯುವಂ, ಕನಿಸ-

ಳಿವರ್. ಜಾಣ ಚಿತ್ರ ದ್ವಿವಚನಕ್ಕೆ - ಭೀಮಾರ್ಜುನರ್, ರಾಮ

ಲಕ್ಷ್ಮಣರ್.

ಕಮನೀನಿಸಮಾವಿಭಕ್ತಿಗ

ಮೊದಲೊಳ್ ಆದಂಕಗಳಂಗಮಂ ದಿತೆಂಬುವು॥.

ದ್ವಿ ಮೊದಲಿಗಳ್ಗಾಗಮಮಿಲ್ಲ

ಸಮಾಸಿಸಿದೊಡಂ ಸರ್ವನಾಮಗುಣವಚನಂಗಳೊಳಂ ॥ ೬೩ ॥

ಅರ್ಥ- ದ್ವಿಬಹುವಚನ ವಿವಕ್ಷೆಯೊಳ್ ದೊರೆವ ವಿಭಕ್ತಿಗಳ್ಗೆ ಮೊದಲೊಳ್ಗಾಗಮಮಿಲ್ಲ. ಸರ್ವನಾಮಗುಣವಚನವಿಶೇಷಣದೊಳ್ಗಾಗಮಕ್ಕೆ ಅಪ್ಪುದು ಆದೇಶವಾಗುವದು.

ಉ.— ದ್ವಿವಚನ, ತೋಳ್ಗಳ್ ರಂಭಾಸ್ತಂಭಕ್ಕತೆಗಳ್, ಕಣ್ಗಳ್ ಮೊದಲಾದವುಗಳ್— ಬಹುವಚನಕ್ಕೆ— ಕಾಲ್ಗಳ್, ದ್ವಿತಾಬ್ಜಂಗಳ್. ಸರ್ವನಾಮ, ಅವುಪಿರಿಯವುಭಾವಿಸಾದಿಂ ತಪ್ಪಿರಿಯವೆನಿಪ್ಪುದಿದು ವಿಭೇದಂ ಸರ್ವ ಗುಣವಾಚಿ, ಇನಿಯದುವು ವಿಷಯಸುಖಂ ಸಾಜೀವನಸವಿಮೊಳ್

ಸಂಗಡಿಸಿ ಸರ್ವನಾಮದ

ಲಿಂಗಾಂತ್ಯಾಕ್ಷರಮವು ವಿಸಾದ್ಯಾಕ್ಷರಂ ॥

ಲಿಂಗದಿಪೊಂದಿಂ ಗುಣವಚ

ನಂಗಳ್ಗಂ ತ್ರ್ಯುದುಕಾರಮಾದೊಡೆಯೊಂದಿಂ ॥ ೬೪ ॥

ಅರ್ಥ- ಸರ್ವನಾಮದ ಲಿಂಗದ ಕಡೆಯಕ್ಷರಕ್ಕಂ, ವಿರಳ

ದ್ಲ ಅವು ಪಾಂಚದ ಅಕ್ಷರಕ್ಕೆ ಸಂಗಡದಿಂ ಪೊಂದು ಮ

ಕ್ಕೆ ಹೋಗುವುದು. ಉದಾ- ಕೆರೆಕೆರೆಯಂಗಳನೇ, ತಿ

ಳಿಂಬಂತು ದುಕರೆವರ್ ಪ್ರತ್ಯಯ ಸಿಕ್ಕಿರುವ ಯಮುನೆ ಸ್ತ್ರೀ

ಪ್ರತ್ಯಯೊಳ್, ನೆರೆದಿರ್ಪ ಸ್ಥಳ ದುವಿಮಾಧಿಯಾಗಿ ಕೆರೆವ

ದೇಶಂ- ಸಂಖ್ಯಾವಾಚಿಗೆ, ಕರಿಯವು, ಅ

ಯವು; ಬರಯುಗಳನುಪ್ಪುಗೊಂಡನೆಯು, ಅಲೆಯವುದಿ

ದನಂಗಳಾದುವವರವರೆಂದು। ಪ್ರತಿತಂಗಳೊಂದನೆಯಂದಿ

ದು, ಅದುಳ್ಳುದುವ್ರಮುಂಟೆಬಂದಜಲದಾಗಮದೊ-

ಳ್. . . . .

ಅಸಂಖ್ಯೇತರಾಂ

ತತ್ಪ್ರತ್ಯಯ ತತ್ಸಮವು ಬಿನಾದಿಗಳೊಳ್ ಉ॥

ಮಿಗೆ ಸ್ತ್ರೀಪುಲ್ಲಿಂಗದೊ

ಳ್ಕಟ್ಟುಮಿರರದರಿರ್ ಉರುಂದುಹೋಗೆಸ್ತ್ರೀಗಳೊಳ್॥೨೦

ಅರ್ಥ- ಸಂಖ್ಯಾವಾಚಿಯ ಕರೆವೆಯತು ಸಾರಕ್ಕೆ ದುಕಾರವು,

ಅವು ಎಂಬ ದರ ಅದಿಗೆ ಹೋಗುವುವು ಬರುವುವು ಸ್ತ್ರೀ-

ಲಿಂಗ ಪುಲ್ಲಿಂಗ ಬಹುವಚನದೊಳ್ ಗಳ್ ಎಂಬುದಕ್ಕೆ ಆ-

ದೇಶವಾಗಿ ಅರ್, ಇರ್, ಉರ್, ಎಂಬುವು ಬರು-

ವವು. ಉದಾ- ಒಳ್ಳಿದುವು, ತಿಳಿದುವು, ದಕ್ಷಿಣವು;

ಪೆಂಡಿರ್, ತೋಳ್ಗರ್, ದೇವರ್, ನಂಟರ್, ಇನಿಯರ್,

ಮಂದಿಗ, ತಂದೆಬಿರ್, ತಾಯ್ಬಿರ್, ಹೊಸೆಬಿರ್,

ಪುಲಿಂಗಮುಂ ಸ್ತ್ರೀಲಿಂಗಮುಮವ
ರ್ಣಿಸಿ ಸಂಖ್ಯಾಸರ್ವನಾಮಕೃದ್ಗುಣವಚನ॥
ಸ್ವರದುರುತದ್ಧಿತಮುಂ ಮುಂ
ದರುವಕ್ಕುಮದಂತಲಿಂಗದೊಳ್ ಕಿದಿರಾಗ್ರ॥ —೭॥

ಅರ್ಥ- ಪುಲ್ಲಿಂಗಮುಂ ಸ್ತ್ರೀಲಿಂಗಮುಂ ಪೇಳಕೆವಳಿಮುಂ ದರುವಕ್ಕುಂ- ಪುಲ್ಲಿಂಗಕ್ಕೆ, ಕೋಬಿದರ್, ನಂದನರ್, ಸ್ತ್ರೀಲಿಂಗಕ್ಕೆ, ಬೇಬಿಯರ್, ಕಾಂತೆಯರ್,, ಅಂಪು ಸ್ತ್ರೀರೂಪದೊಳಮರ್ಣಿಸಿ ಸಂಖ್ಯೆಯುಂ, ಸರ್ವನಾಮಮುಂ, ಕೃತ್ತು, ಗುಣವಚನಮುಂ, ತದ್ಧಿತಮುಂ, ಇದರಿಂದ ಬರದೊಳ್ ದುವಕ್ಕು ಸ್ತ್ರೀ ಕಂಕರ್, ಪಯಿಂಥಾನಿವರ್, ಸರ್ವನಾಮಕ್ಕೆ, ಏರರ್, ಅವರ್, ಇವರ್, ಉವರ್, ಕೃತ್ತಿಂಗೆ, ಮಾಡಿದರ್, ಬೇಡಿದರ್, ಕೊಂಡರ್, ನುಡಿದರ್, ಸುಳಿಗಲ್ಲಿಂ ನಲ್ಲರಕ್ಕದ ಪೊಲ್ ಜಟ್ರಾಗಮುಂ ಬರಂತೆಯುಂ ಮಂದಿ। ಗತಿವಗೆಪ್ರಯುಕ್ತಿತೊ, ಲ್ಗೊದಂಬದಂ ಮಾಡಿದರ್ ಮುಗಾತರಕ್ಕೆವಿಸರ್ಗ॥ ಗುಣವಚನಕ್ಕೆ, ಬೆಳ್ಳರ್, ಬಲ್ಲಿದರ್; ತದ್ಧಿತಕ್ಕೆ, ಮಣಿಗಾರರ್, ಕಂಚುಗಾರರ್, ಜೆರೆಗಾರರ್, ಪುಲ್ಲಿಂಗಮಲ್ಲದಂತೆಯುಂ ಬೋಪಂಸುರರ್, ನರರ್, ದಡ್ಡರ್,

[illegible]

[illegible]

Appointments.

बेळगांव जिल्ह्यांतील मास्तर लो-
कांच्या नेमणुका.

विगीं कोणकोणत्या इसमांची, एप्रिल महिन्यांत
रण्यांत आली त्याजबद्दल.

१ कसबा मरगड तालूक पिडी येथील शाळेतील इं-
ग्रजी मदतनीस बापूजी बाबुराव दिवेकर यांस बेळ-
गांव अँग्लोव्हर्न्याक्युलर स्कुलांत दरमहा १८ रु-
चे जाग्यावर तारीख १ पासून नेमण्यांत आले आहे.
कसबा एमकनमर्डी येथील पंतोजी शिवाजी आ-
पाजी यांणी शाळेचें काम वाईट केल्यामुळें त्यांस क-
मी पगारावर कसबा असुंडी तालुक परसगड ये-
थें दरमहा १० रु. पगारावर नेमणुक करण्यांत आ-

ली आहे. पूर्वी त्यांला १५ मिळत असे. नेमणूक ता

रीख सदर.

३ कसबा असुंडी येथील पंतोजी नारायण रामचंद्र बोद्रे यांणीं काम हुषारीनें केलें. सबब त्यांला उगो ळ येथें दरमहा १४ रु. पगारावर नेमणूक करण्यांत आली आहे. पूर्वी त्याला पगार १२ रु. मिळत असे. नेमणूक तारीख सदर.

४ कसबा उगोळ तालूक परसगड येथील पंतोजी पराप्पा सिद्दप्पा यांचा वर्ग कसबा एमकनमर्डी- येथें पंतोजीचे जाग्यावर दरमहा १५ रुपयेवर ता० १ एप्रील पासून करण्यांत आला आहे.

५ कसबा सौंदत्ती तालूक परसगड येथील शाळेंतील शिक्षक डोंगरी बाबासाव यांचा वर्ग मदतनीसचे जाग्यावर दरमहा १५ रु. पगारावर कसबा संपगांव तालूक मजकूर या शाळेंत करण्यांत आला. पूर्वी त्याला पगार ११ रुपये होता, हुषारीमुळें. नेमणुक ता. १ ए. मि.

६ कसबा संपगांव तालूक मजकूर शाळेंतील मदत-

नीस यांचावर्गी कसबा सौंदत्ती तालुक परसगड शाळेंत शिक्षकीचे जाग्यावर १५ रु॰ वर करण्यांत आला. पगार सारखाच आहे.

२ नवीन शाळा, एप्रिल १८६७ महिन्यापासून झाल्या त्यावर कोणास नेमिलें त्याजबद्दल.

१ कसबा बेळगांव तालूक मजकूर या ठिकाणीं नवीन मराठी शाळा स्थापन करण्यांत आली. त्याजा ग्यावर बेळगांव एथील अ्याँ॰ व॰ स्कुलांतील मदत नीस माहादाजी रामचंद्र बोडस यांस नेमण्यांत आलें आहे. त्याला पगार पूर्वीं १६ असून हाल्लीं १८ रुपये आहे.

कसबा धमणगी तालूक बेळगांव येथील नवीन शाळेचे पंतोजीचे जाग्यावर आबाजी अणाजी शिक्षक बागेवाडी यांजला नेमण्यांत आलें आहे. त्याला पगार पूर्वीं ६ रु॰ असून हाल्लीं १२ रुपये. यानें पूर्वीं बदलीपंतोजीचें काम पाहिलें आहे.

२ कसबा अथणी शाळेंतील शिक्षक विरुपाक्ष

बिन केंचणा यांस नवीन शाळेवर कसबा आबडग

टी येथें पंतोजीचे जाग्यावर दरमहा १२रु.पगारा

वर नेमणूक करण्यांत आली आहे. त्यालापूर्वी

पगार ८रु. मिळत असे.

४ आथणी येथील ८ रुपयाचे शिक्षकीचे जाग्यावर

अण्णाचारी सत्यबोधाचार्य उमेदवार यांस नेम-

ण्यांत आलें आहे.

३ बेळगांव जिल्ह्यांत मुलींच्या शाळा स्थापन करणे पैकी ३

सरकारी शाळा स्थापन झाली. त्यांजवर कोणाची नेमणूक

जाहली. त्यांजबद्दल तपशील. तारीख १ एप्रिल सन

१८६७ पासून.

१ बागेवाडी तालुक बगेवाडी मुलींच्या शाळे-

वर बडसुद अम्मा नवीन उमेदवार यांची नेम-

णूक पंतोजीचे जाग्यावर रु. पगारावर करण्यां

त आली आहे.

कसबा अथणी येथें दरमहा १रु. वर गंगेबा

बिन गणमणेप्पा यांस नेमण्यांत आलें आहे.

यांस आजपर्यंत ..... त्यांत नोकरी नव्हती.

कसबा बैलहोंगळ येथील पंतोजींचे जाग्यावर संगे या रानेया उमेदवार याची नेमणुक दरमहा १६ रु॰ वर करण्यांत आली आहे.

कसबा किन्तूर येथील पंतोजीचे जाग्यावर त्यांचे स्कुलांतील पंतोजी सातवीर अप्पा रानेप्पा यांस दरमहा १५ रु॰ वर नेमण्यांत आलें आहे.

कसबा कित्तूर येथें मुसलमानी शाळेवर मस्तुम हुसेन साहेब यास दरमहा १६ रु॰ वर नेमण्यांत आलें आहे.

कसबा भंडेगळी तालूक बेळगाव हा शाळा बंद होऊन पुनः सुरू झाली. त्याजाग्यावर शंकर पडसुर अप्पा उमेदवार यास दरमहा १२ रु॰ वर नेमण्यांत आलें आहे.

येणप्रमाणें बगैरेगीर नवीन शाळा आणि नवीन नेमणुका गेल्या एप्रिल महिन्यांत झाल्या. ता॰ १६ मे १८६७

Chanbassapa B. D.

डि॰ इ॰ इ॰ जिल्हा बेळगांव.

Natural Philosophy.

ಪದಾರ್ಥವಿಜ್ಞಾನ ೧ನೇ ಭಾಗ.

೧ ಪದಾರ್ಥವಿಜ್ಞಾನ ಅಥವಾ ಪ್ರಕೃತಿಶಾಸ್ತ್ರವು ಯಾವತ್ತು ಸೃಷ್ಟಿಯ ಪದಾರ್ಥಗಳನ್ನು ಪರೀಕ್ಷಿಸುತ್ತದೆ. ಅದು ಪ್ರತ್ಯೇಕ ಪದಾರ್ಥಗಳ ಸಾಧಾರಣಧರ್ಮಗಳನ್ನು ಹೇಳುವದಲ್ಲದೆ ಆ ಪದಾರ್ಥಗಳಲ್ಲಿ ಪರಸ್ಪರವಾಗಿ ನಡೆಯುವ ವ್ಯಾಪಾರಗಳನ್ನು ತಿಳಿಸುತ್ತದೆ. ಈ ಶಾಸ್ತ್ರದ ಸಹಾಯದಿಂದ ಪ್ರಕೃತಿಕೌತುಕಗಳನ್ನು ಗೊತ್ತುಹಚ್ಚಿ, ಅವುಗಳ ಅರ್ಥವನ್ನು ಪ್ರಕಟಪಡಿಸುವದಕ್ಕೂ, ಕಾರಣಗಳಿಂದ ಕಾರ್ಯಗಳನ್ನು ಶೋಧಿಸುವದಕ್ಕೂ, ಯಾವತ್ತು ಪದಾರ್ಥಗಳನ್ನು ಪ್ರವರ್ತಿಪಡಿಸುವಂಥ ಸೃಷ್ಟಿನಿಯಮಗಳನ್ನು ಗೊತ್ತುಹಚ್ಚುವದಕ್ಕೂ ನಾವು ಸಮರ್ಥರಾಗಿದ್ದೇ-

ಸೃಷ್ಟಿ

೨ ಒಂದು ಅಮರ್ಯಾದವಾದ ಅವಕಾಶವೂ, ಅದರಲ್ಲಿರುವ ವಸ್ತುಗಳೂ ಕೂಡಿ ಸೃಷ್ಟಿಯೆಂದು ಕರೆಯಲ್ಪಡುತ್ತದೆ. ಈ ಸೃಷ್ಟಿಯ ಮರ್ಯಾದೆ ಇಷ್ಟೇ ಎಂದು ಹೇಳುವದು ಮನುಷ್ಯರಿಂದಾಗದು. ರಾತ್ರಿಯಲ್ಲಿ ಚುಕ್ಕೆಗಳು ಇರುವಾಗ ಸ್ವಚ್ಛವಾದ ಆಕಾಶದಲ್ಲಿ ನಾವು ನೋಡುವ ನಕ್ಷತ್ರ

